ಬಂದ ಪುಟ್ಟಾಯಿ

ನಾಟಕ



ಸಿ.ಪಿ. ನಾಗರಾಜ

ಒಂದು ರೂಪಾಯಿ ನಾಟಕದ ಬಗ್ಗೆ ಕೆ.ಮರುಳಸಿದ್ದಪ್ಪನವರ ಅಭಿಪ್ರಾಯ

'ಒಂದು ರೂಪಾಯಿ' ನಾಟಕದ ಶೀರ್ಷಿಕೆಯೇ ಹೇಳುವಂತೆ ಕೇವಲ ಒಂದು ರೂಪಾಯಿ ಹೆಚ್ಚಿಗೆ ಕೂಲಿ ಕೇಳಿದ ಕಾರ್ಮಿಕನ ಮೇಲೆ ಕ್ರೂರವಾಗಿ ಎರಗುವ ರೈತನ ಕಥಾ ಸಂದರ್ಭದ ಮೂಲಕ ಶೋಷಣೆಯ ವಿವಿಧ ಮಾದರಿಗಳ ನಿರೂಪಣೆಯಾಗುತ್ತದೆ. ಹಳ್ಳಿಯಲ್ಲಿ ಕೂಲಿಕಾರರ ಶೋಷಣೆ ಮಾಡುವ ರೈತರು ಪಟ್ಟಣಕ್ಕೆ ಹೋದಾಗ ಸರ್ಕಾರಿ ಕಛೇರಿಗಳಲ್ಲಿ ನೌಕರರಿಂದ ಅಧಿಕಾರಿಗಳಿಂದ ಶೋಷಣೆಗೆ ಗುರಿಯಾಗುತ್ತಾರೆ. ಇವರೆಲ್ಲರನ್ನೂ ರಾಜಕಾರಣಿಗಳು, ಮಂತ್ರಿ ಮಹೋದಯರು ಸುಲಿಗೆ ಮಾಡುತ್ತಾರೆ. ಹೀಗೆ ಶೋಷಣೆಯ ಜಾಲವೇ ಜನರ ಸುತ್ತ ಹೆಣೆದುಕೊಂಡಿದೆ.

ಬೇರೆ ಬೇರೆ ಸ್ವತಂತ್ರ ಬಿಡಿ ದೃಶ್ಯ ಕಲ್ಪನೆಯ ಮೂಲಕ ಇದೆಲ್ಲವನ್ನೂ ಚಿತ್ರವತ್ತಾಗಿ ನಾಟಕದಲ್ಲಿ ನಿರೂಪಿಸಲಾಗಿದೆ. ಮುಕ್ತಾಯದಲ್ಲಿ ರೈತನಿಗೆ ತನ್ನ ಸ್ವಾರ್ಥ ಮತ್ತು ಅಸಹಾಯಕತೆಗಳೆರಡೂ ಮನದಟ್ಟಾಗಿ ಕೂಲಿಕಾರನೊಂದಿಗೆ ಒಂದಾಗಿ ಶೋಷಕ ವ್ಯವಸ್ಥೆಯ ವಿರುದ್ಧ ಹೋರಾಡಲು ಸಂಕಲ್ಪ ಮಾಡುವ ವಿಚಾರವಿದೆ. ಆದರೆ ಈ ಹೋರಾಟ ಸರಳವಾಗಿಲ್ಲವೆಂಬುದೂ ನಾಟಕದಲ್ಲಿ ಪ್ರಸ್ತಾಪಗೊಳ್ಳುತ್ತದೆ. ಶೋಷಣೆಯ ಬೇರುಗಳು ದೈವಶ್ರದ್ಧೆ, ಧಾರ್ಮಿಕ ನಂಬಿಕೆ, ಸಾಮಾಜಿಕ ವ್ಯವಸ್ಥೆಯಲ್ಲೇ ಆಳವಾಗಿ ಬೇರೂರಿವುದನ್ನೂ ದೃಷ್ಟಾಂತಗಳ ಮೂಲಕ ತೋರಿಸಿಕೊಡಲಾಗಿದೆ.

ಒಂದು ರೂಪಾಯಿ

(ರಚನೆ : 1985)

ಸಿ.ಪಿ.ನಾಗರಾಜ

ನಾಗು ಸ್ಮಾರಕ ಪ್ರಕಾಶನ

75, 'ಎ' ಬ್ಲಾಕ್, 5 ನೆಯ ಕ್ರಾಸ್, ಕೃಷ್ಣ ಗಾರ್ಡನ್,

ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು-560059. ಮೊ.9986347521.

ngy7777@gmail.com

ಪಾತ್ರವರ್ಗ

ಕೂಲಿ

ಕತ್ತೆ ಜವರ

ಬ್ಯಾಂಕ್ ಕಾರ್ಯದರ್ಶಿ

ಗ್ರಾಮ ಲೆಕ್ಕಿಗ

ಸೇಟು

ತೋಟಿ

ಗೌಡ

ರೈತ ಮುಖಂಡ

ರೈತರು

ಪೋಲಿಸ್ ಇನ್‌ಸ್ಪೆಕ್ಟರ್

ಪೋಲಿಸರು

ಮಂತ್ರಿ

ತಮ್ಮಣ್ಣ ಮೇಷ್ಟ್ರು

ಒಂದು ರೂಪಾಯಿ

(ಅಂಗಡಿ ಬೀದಿಯಲ್ಲಿನ ಒಂದು ಚೌಕ. ಬೆಳಗ್ಗೆ ಎಂಟು ಗಂಟೆಯ ಸಮಯ. ಕತ್ತೆ ಜವರನೆಂಬ ಒಬ್ಬ ರೈತ ಅಲ್ಲಿಗೆ ಬರುತ್ತಾನೆ. ಕೂಲಿಗಳು ಯಾರಾದರೂ ಅಲ್ಲಿದ್ದಾರೆಯೆ ಎಂದು ಸುತ್ತಮುತ್ತ ಕಣ್ಣಾಡಿಸುತ್ತಾನೆ. ಮುಚ್ಚಿದ್ದ ಅಂಗಡಿಯ ಮುಂದೆ, ಅಲ್ಲಿ ಗೋಡೆಗೆ ಒರಗಿಕೊಂಡು ಕುಳಿತಿದ್ದ ಒಬ್ಬ ಕೂಲಿಯವನನ್ನು ಕಂಡು, ಅವನ ಬಳಿಗೆ ಬರುತ್ತಾನೆ.)

ಕತ್ತೆ ಜವರ : ಕೂಲಿಗೆ ಬರ್ತಿಯೇನಯ್ಯ?

ಕೂಲಿ : ಬತ್ತೀನಿ ಕಣಪ್ಪ.

ಕತ್ತೆ ಜವರ : ಎದ್ದು ಬಾ ಮತ್ತೆ.

ಕೂಲಿ : (ಕುಳಿತಲ್ಲೇ ಮಿಸುಗಾಡುತ್ತಿರುತ್ತಾನೆ.)

ಕತ್ತೆ ಜವರ : ಇದೇನಯ್ಯ? ಬತ್ತೀನಿ ಅಂದ್ಬುಟ್ಟು ತಿರ್ಗ ಮುಲ್ಗುಟ್ಕೊಂಡು ಅಲ್ಲೇ ಕುಂತಿದ್ದೀಯಲ್ಲ. ಎದ್ದು ಬಾರಯ್ಯ.

ಕೂಲಿ : (ನಿಧಾನವಾಗಿ ಮೇಲಕ್ಕೆ ಏಳುತ್ತಾ)
ಎಷ್ಟಪ್ಪ ಕೂಲಿ?

ಕತ್ತೆ ಜವರ : ಮಾಮೂಲಿ ಕಣ ಬಾರಯ್ಯ.

ಕೂಲಿ : ಮಾಮೂಲಿ ಅಂದ್ರೆ ಎಷ್ಟು?

ಕತ್ತೆ ಜವರ : ಮಾಮೂಲಿ ಕಣ ಬಾರೊ.

ಕೂಲಿ : ಅದೆಷ್ಟು ಅಂತ ಮೊದ್ಲೆ ಹೇಳ್ಬುಡಪ್ಪ?

ಕತ್ತೆ ಜವರ : ಮೂರು ಹೊತ್ತು ಊಟ.... ಒಂಬತ್ತು ರೂಪಾಯಿ.

ಕೂಲಿ : ಬರೊದಿಲ್ಲ ಕಣಪ್ಪ.

ಕತ್ತೆ ಜವರ : ಬರೊದಿಲ್ವ, ಇನ್ನೆಷ್ಟು ಕೊಡ್ಬೇಕು?

ಕೂಲಿ : ಮೂರು ಹೊತ್ತು ಊಟ...ಹತ್ತು ರೂಪಾಯಿ.

ಕತ್ತೆ ಜವರ : ಏನ್ಲಾ? ಎಷ್ಟು ಅಂದೆ?

ಕೂಲಿ : ಊಟ ಮೂರು ಹೊತ್ತು ; ದುಡ್ಡು ಹತ್ತು ರೂಪಾಯಿ.

ಕತ್ತೆ ಜವರ : ಊರೋರೆಲ್ಲಾ ಒಂಬತ್ತು ರೂಪಾಯಿನಂಗೆ ಕೂಲಿ ಕೊಡ್ತಿರುವಾಗ, ನಾನು ನಿಂಗೆ ಹತ್ತು ರೂಪಾಯಿ ಇಡ್ರಿಸ್ಬೇಕೆ? ಮ್ಯಾಗಳ ಒಂದು ರೂಪಾಯಿ ನಿಮ್ಮಪ್ಪನ ಮನೆ ಚಪ್ಪೋಡೆ?

ಕೂಲಿ : ಅಪ್ಪೋ.... ನಿಂಗೆ ದರ್ದು ಇದ್ರೆ ಕೊಟ್ಟು ಕರ್ಕೊಂಡು ಹೋಗು. ಕಷ್ಟವಾದ್ರೆ ಬ್ಯಾಡ ಬುಡಪ್ಪ.

ಕತ್ತೆ ಜವರ : ಏನ್ಲಾ ಕಷ್ಟವಾದ್ರೆ ಬುಡೋದು? ಕೂಲಿ ಕೇಳೂಕು ಒಂದು ನಿಯತ್ತು ಬ್ಯಾಡ್ವೇನ್ಲಾ? ಎಲ್ಲರಿಗೂ ಒಂದು ರೇಟ್ ಆದ್ರೆ ನಿಂದೆ ಪೆಸಲ್ಲೆ.

ಕೂಲಿ : ನಾನೇನು ಇವತ್ತು ಹೊಸದಾಗಿ ಕೇಳ್ಬುಟ್ನೆ? ಗದ್ದೆ ನಾಟಿ ಶುರುವಾತ್ತಾವಿಂದ್ಲು ಹತ್ತು ರೂಪಾಯಿನಂಗೆ ನಡೀತಾದೆ.

ಕತ್ತೆ ಜವರ : ಲೇ ಬೂಸಿ ಹೊಡಿಬ್ಯಾಡ ಕಲ. ನೆನ್ನೆ ತಾನೆ ಮೂರಾಳ್ನ ಕರ್ಕೊಂಡು ಹೋಗಿವ್ನಿ ಒಂಬತ್ತು ರೂಪಾಯಿನಂಗೆ.

ಕೂಲಿ : ಅದ್ನೆಲ್ಲಾ ಕಟ್ಕೊಂಡು ನಂಗೇನಪ್ಪ. ನೀನು ಹತ್ತು ರೂಪಾಯಿ ಕೊಟ್ರೆ ಬತ್ತೀನಿ, ಇಲ್ದೇದ್ರೆ ಇಲ್ಲ.

ಕತ್ತೆ ಜವರ : ನೀನು ಕೇಳ್ದಷ್ಟೆ ಕೊಡ್ಬೇಕು ಅನ್ನೂದೇನ್ಲೆ?

ಕೂಲಿ : ನಾನು ಅದ್ನೆ ಅಲ್ವೆ ಹೇಳ್ತಾ ಇರೋದು. ನಿಂಗೆ ಕೊಡೂಕಾಗ್ದೆ ಹೋದ್ರೆ ಸುಮ್ನಿರಪ್ಪ ಅಂತ. ನಾನೇನು ಈಗ ಬತ್ತೀನಿ.... ಬತ್ತೀನಿ ಅಂತ ನಿನ್ನ ಒಸಕ್ತಾ ಇದ್ದನೆ?

ಕತ್ತೆ ಜವರ : ಹಂಗಾರೆ ದಿವಸಕ್ಕೊಂದೊಂದ್ ತರ ಕೂಲಿ ಏನ್ಲಾ ನಿಮ್ಮದು? ನೀವು ಕೇಳ್ ಕೇಳ್ದಂಗೆಲ್ಲಾ ಕೊಟ್ಕೊಂಡು ಹೊಯ್ತಿರ್ಬೇಕೊ?

ಕೂಲಿ : ಎಲ್ಲಾ ಕಡೆ ನಡೀತಾ ಇರುವಂಗೆ ಕೊಡಪ್ಪ. ನೀನೇನು ಹೆಚ್ಚಿಗೆ ಕೊಡ್ಬೇಡ.

ಕತ್ತೆ ಜವರ : ಅದ್ಯಾರ್ಲ, ನಾನು ಕಾಣ್ದಂಗೆ ನಮ್ಮೂರ್ರಲ್ಲಿ ನಿಂಗೆ ಹತ್ತು ರೂಪಾಯಿ ಕೂಲಿ ಕೊಡ್ತಾ ಇರೋರು?

ಕೂಲಿ : ಆ ಮೂಲೆಕೇರಿ ನರಿ ನಿಂಗಣ್ಣ ಎಷ್ಟು ಕೊಟ್ಟು ಕರ್ಕೊಂಡು ಹೋಗಿದ್ದ ಅಂತ ಕೇಳಪ್ಪ. ನಾನೇನು ಸುಳ್ಳು ಹೇಳನೆ?

ಕತ್ತೆ ಜವರ : ಅವ್ನೆ.... ಆ ಬಡ್ಡಿ ಹೈದಂಗೇನು? ಆಣಿ ಬಡ್ಡಿ ತಕ್ಕೊಂಡು, ಹತ್ತಾರು ಮನೆ ಎಕ್ಕ ಹುಟ್ಸಿಸಿ ಗುಡ್ಡೆ ಹಾಕವ್ನೆ ದುಡ್ಡ. ಇವತ್ತು ಯಾಕೆ ಹೋಗ್ಲಿಲ್ಲ ಅವನ್ತಕೆ?

ಕೂಲಿ : ಅವನ ಗದ್ದೆ ನಾಟಿ ಎಲ್ಲಾ ನೆನ್ನೆಗೆ ಮುಗಿದೋಯ್ತು.

ಕತ್ತೆ ಜವರ : ಇವತ್ತು ಅವನ ಮನೆ ಗೋಡೆ ಉಂಟ್ರೋಕೆ ಹೋಗುವೆ.... ದೊಡ್ಡ ಗಂಟೇ ಸಿಗೋದು.

ಕೂಲಿ : ಯಾಕಪ್ಪ ಹಿಂಗೆಲ್ಲಾ ಇಲ್ಲಾಡಿಯೆ? ಸುಮ್ನೆ ಹೋಗಪ್ಪ.

ಕತ್ತೆ ಜವರ : ಏನ್ಲಾ ಸೂಳೇಮಗ್ನೇ.... ಹೋಗುಗೀಗು ಅಂತ ಬೋ ಸದರವಾಗಿ ಮಾತಾಡ್ತ ಇದ್ದೀಯೆ?

ಕೂಲಿ : ಸೂಳೇಮಗ ಗೀಳೆಮಗ ಅಂತ ಬಯ್ಬೇಡ ಕಣಪ್ಪ ನೀನು.

ಕತ್ತೆ ಜವರ : ಇನ್ನೇನು ನಿನ್ನ ಗೌಡ್ರೆ ಅನ್ನನೆ ಬಡ್ಡಿಹೈದ್ನೆ?

ಕೂಲಿ : ಅಪ್ಪೋ.... ತಿರ್ಗ ತಿರ್ಗ ಬಯ್ತಿದ್ದೆ ನೋಡು.... ಚೆನ್ನಾಗಿರೋದಿಲ್ಲ.

ಕತ್ತೆ ಜವರ : ಏನ್ಲಾ ಚೆನ್ನಾಗಿರೋದಿಲ್ಲ? ಎಲ್ಲೆಲ್ಲಿಂದ್ಲೊ ಇಲ್ಲಿಗೆ ಬಂದು ಹಿಟ್ಟಿಗೆ ಸೇರ್ಕೊಂಡಿರೋ ಪರ್ದೇಶಿ ಬಡ್ಡತ್ತವ್ ನೀವು.... ನಿಮ್ಗೆ ಇಷ್ಟೊಂದು ಪೊಗರು ಇರ್ಬೇಕಾದ್ರೆ.... ಇನ್ನು ಇಲ್ಲೇ ಹುಟ್ಟಿ.... ಇಲ್ಲೇ ಬೆಳ್ದೀರು ನಮಗೆ ಎಷ್ಟು ಇರ್ಬೇಕು? ಹಲ್ಲು ಹಿಡಿದು ಮಾತಾಡೋ ಲೌಡಿ ಮಗ್ನೆ. ಎಟ್ಟುಬುಡಬೇಕಂತೆ ಒಂದು ರೂಪಾಯ್ನ ಹೆಚ್ಚಾಗಿ.... ಇವ್ರಪ್ಪ ಕೊಟ್ಟು ಮಡಗಿದ್ದ.

ಕೂಲಿ : ನೀನು ಸುಮ್ನೆ ಹಿಂಗೆಲ್ಲಾ ಬಾಯಿಗೆ ಬಂದಂಗೆ ಬಯ್ತಿದ್ರೆ ನೋಡಪ್ಪ ಸರಿ ಹೋಗೂದಿಲ್ಲ.

ಕತ್ತೆ ಜವರ : ಏನ್ಲಾ ಸರಿ ಹೋಗೂದಿಲ್ಲ? ಏನು ಮಾಡುಬುಟ್ಟಿಲ?

(ಎಂದು ಬಯ್ಯುತ್ತ ಅತಿ ಉದ್ವಿಗ್ನತೆಯಿಂದ ಮುನ್ನುಗ್ಗಿ ಕೂಲಿಯವನ ಮುಖದ ಮೇಲೆ ಪಟಪಟನೆ ಹೊಡೆಯತೊಡಗುತ್ತಾನೆ. ಅಷ್ಟರಲ್ಲಿ ಅದೇ ಮಾರ್ಗದಲ್ಲಿ ಬಂದ ಮೇಷ್ಟ್ರು ತಮ್ಮಣ್ಣನವರು ಓಡಿ ಬಂದು ಕತ್ತೆ ಜವರನನ್ನು ತಡೆಯುತ್ತಾರೆ.)

ತಮ್ಮಣ್ಣ : ಏನು ಜವರಯ್ಯ ಇದು? ಪಾಪ.... ಆ ಕೂಲಿಯವನ್ನ ಯಾಕಯ್ಯ ಹಿಂಗೆ ಹೊಡೀತಾ ಇದ್ದೀಯೆ?

ಕತ್ತೆ ಜವರ : ಪಾಪ... ಕೂಲಿಯವನು! ಇವನ ಕೂಲಿಯವನು ಅಂತ ಕರಿಬೇಡಿ, ದಿವಾನ ಅಂತ ಕರೀರಿ.... ದಿವಾನ ಬಡ್ಡಿಹೈದನ್ ತಂದು.

ತಮ್ಮಣ್ಣ : ಇದ್ಯಾಕಯ್ಯ ಹಿಂಗೆ ಬಯ್ತಾ-ಹೊಡೀತಾ ಇದ್ದೀಯೆ?

ಕತ್ತೆ ಜವರ : ಹಂಗೆ ನಮ್ಮ ಹೊಟ್ಟೆ ಉರಿಸ್ತರೆ ಈ ಬಡ್ಡಿಹೈಕ್ಳು.

ತಮ್ಮಣ್ಣ : ಅದೇನು ಮಾಡ್ದ ಅಂತ ಹೇಳಯ್ಯ?

ಕತ್ತೆ ಜವರ : ನೀವು ಕಂಡಿರುವಂಗೆ ಊರಲ್ಲೆಲ್ಲಾ ಮೂರು ಹೊತ್ತು ಊಟ. ಒಂಬತ್ತು ರೂಪಾಯಿನಂಗೆ ಕೂಲಿ ನಡೀತಾದೆ ಅಲ್ವೇನಪ್ಪ?

ತಮ್ಮಣ್ಣ : ಇರಬೇಕು ಕಣ ಹೇಳಯ್ಯ.

ಕತ್ತೆ ಜವರ : ಇವನ ಈಗ ಕೂಲಿಗೆ ಕರದ್ರೆ ಹತ್ತು ರೂಪಾಯಿ ಕೇಳ್ತನಲ್ಲ.... ನಾವೆಲ್ಲಿಂದ ತಂದು ಕೊಡ್ಮ ರೈತರು? ಇನ್ನು ನಿಮ್ಮಂಗೇನಾರ ಯಾವ ಮಳೆ ಹುಯ್ಯಲಿ.... ಹುಯ್ಯದೇ ಹೋಗ್ಲಿ.... ಯಾವ ಬೆಳೆ ಆಗ್ಲಿ.... ಆಗ್ದೇ ಹೋಗ್ಲಿ ಮೂವತ್ತು ದಿನ ತುಂಬ್ತಿದ್ದಂಗೆ "ಟಾ" ಅಂತ ಸರ್ಕಾರಿ ಸಂಬಳ ಬತ್ತಿದ್ರೆ.... ಎಳ್ದು ಎಳ್ದು ಕೊಡ್ಬೋದಾಗಿತ್ತು.

ತಮ್ಮಣ್ಣ : ಇದೇನಯ್ಯ.... ನಂಗೆ ತಿರುಗಿಸಿಬುಡ್ತಾ ಇದ್ದೀಯ ನಿನ್ನ ಬಾಣನ?

ಕತ್ತೆ ಜವರ : ಸುಮ್ನೆ ಹೇಳ್ದೆ ನೀವೇನು ಬೇಜಾರು ಮಾಡ್ಕೊಬ್ಯಾಡಿ. ನೋಡಿ ಮೇಷ್ಟ್ರೆ, ಈ ಕೂಲಿಯವರು ಕೇಳ್ ಕೇಳ್ದಂಗೆಲ್ಲಾ ಕೊಡೂಕೆ ನಾವು ರೈತರು ಏನಾದ್ರು ಠಸ್ಸೆ ಹೊಡ್ದವೆ?.... ನಾವೇನು ದುಡ್ಡಿನ ಗಿಡ ನೆಟ್ಟಿದ್ದವೆ? ಒಂದು ರೂಪಾಯ್ನ ಹೆಚ್ಚಾಗಿ ಕೇಳ್ತಾ ಅವ್ನಲ್ಲ, ಯಾರ್ಮನೆ ಹಾಳ್ಮಾಡಿ ತಂದು ಕೊಡ್ಲಿ ನೀವೆ ಹೇಳಿ?

ತಮ್ಮಣ್ಣ : ಈಗ ಒಂದು ರೂಪಾಯಿ ಹೆಚ್ಚಾಗಿ ಕೊಟ್ಟೇನಯ್ಯ?

ಕತ್ತೆ ಜವರ : ಎಲ್ಲಿಂದ ತಂದು ಕೊಡನೆ? ನನ್ನ ತಾವೇನು ದುಡ್ಡಿನ ಚೀಲ ಕುಣ್ದದೆ?

ತಮ್ಮಣ್ಣ : ಅವ್ನಿಗೆ ಇನ್ನೂ ಕೊಡ್ಲಿಲ್ಲ, ಬುಡ್ಲಿಲ್ಲ. ಆ ಬಡಪಾಯಿನ ಯಾಕಯ್ಯ ಹೊಡ್ದೆ.

ಕತ್ತೆ ಜವರ : ಹೊಡೀದೆ ಇನ್ನೇನು ಮಾಡ್ಬೇಕು ಹೇಳಿ? ಈ ಪರ್ದೇಶಿ ಬಡ್ಡತ್ತವ್ ಎಲ್ಲೆಲ್ಲಿಂದ್ಲೋ ಬಂದು ನಮ್ಮ ಊರನ್ನೇ ಕೆಡ್ಸಾಕುಬುಟ್ರು. ಇವರು ಗೆಯ್ಯೋದು ಅಷ್ಟರಲ್ಲೇ ಅದೆ. ಕುಂತ್ಕೊಂಡು.... ನಿಂತ್ಕೊಂಡೇ ದಿನ ತುಂಬಿಸ್ಬುಡ್ತರೆ. ಇವರಿಗೆ ಹಿಟ್ಟ ಓನಿಸಿ ಓನಿಸಿ ನಮ್ಮನೆ ಹೆಂಗಸ್ರೆಲ್ಲಾ ಬತ್ತಿ ಬಾಳೇಕಾಯಿ ಆಗೋದ್ರು. ಈ ಕೂಲಿಯವರ ಜೊತೇಲಿ ಹೊಡ್ದಾಡಿ ನಮ್ಗೂ ಸಾಕಾಗ್ಹೋಗದೆ ಮೇಷ್ಟ್ರೆ.

ತಮ್ಮಣ್ಣ : ನಿನ್ನ ಹತ್ತಿರ ಹೊಟ್ಟೆ ಪಾಡಿಗೆ ದುಡಿಯೋನು ಒಂದು ರೂಪಾಯಿ ಹೆಚ್ಚಾಗಿ ಕೇಳ್ದ. ಕೇಳದ್ದಕ್ಕೆ ಇಷ್ಟೊಂದು ಕೋಪ ಮಾಡ್ಕೊಂಡು ಹೊಡ್ದುಬುಟ್ಟಲ್ಲ.... ಇದು ಸರಿಯೇನಯ್ಯ? ಜವರಯ್ಯ, ನೀನು ಕಷ್ಟಪಟ್ಟು ಬೆಳೆದ ಬೆಳೆ ಮಾತ್ರವಲ್ಲ, ನಿನ್ನ ರಕ್ತನೆ ಜೀವಂತವಾಗಿ ಕುಡಿತಾವ್ರಲ್ಲ.... ಅಂತಾವರ್ಗೆ ಯಾವತ್ತಾದ್ರು ಒಂದು ದಿನ ಹಿಂಗೆ ಹೊಡ್ದಿದ್ದಿಯೇನಯ್ಯ?

ಕತ್ತೆ ಜವರ : ಯಾರು ಸ್ವಾಮಿ ನನ್ನ ರಕ್ತ ಕುಡೀತಾ ಇರೋರು?

ತಮ್ಮಣ್ಣ : ಯಾರು ಅಂತ ನಾನೇ ಹೇಳ್ಕೊಡ್ಬೇಕೆ?.... ನೋಡು ನೀನು ಬಾವಿ ತೆಗೆಸಿ ಪಂಪ್‌ಸೆಟ್ ಇಡ್ಸಿದ್ದೀಯಲ್ಲ.... ಅದಕ್ಕೆ ದುಡ್ಡು ಎಲ್ಲಿಂದ ಬಂತು?

ಕತ್ತೆ ಜವರ : ಸರ್ಕಾರದಿಂದ ಸಾಲ ತಕೊಂಡೆ.

ತಮ್ಮಣ್ಣ : ನೀನು ಬಾವಿ ತೋಡ್ಸುಕೆ ಸಾಲ ಮಾಡ್ದಲ್ಲ, ಅದರ ಸಮಾಚಾರ ನಂಗೊಸಿ ಹೇಳು ಮತ್ತೆ.

ಕತ್ತೆ ಜವರ : ಅದರ ಸುದ್ದಿ ಈಗ್ಯಾಕಪ್ಪ?

ತಮ್ಮಣ್ಣ : ನೀನು ಹೇಳು, ನಂಗೆ ಸ್ವಲ್ಪ ಕೇಳ್ಬೇಕು ಅಂತ ಆಸೆ.

ಕತ್ತೆ ಜವರ : ಅದೊಂದು ದೊಡ್ಡ ಕತೆ ಕಣಪ್ಪ.

ತಮ್ಮಣ್ಣ : ದೊಡ್ಡ ಕತೆಯೊ... ಚಿಕ್ಕ ಕತೆಯೊ ಹೇಳು ಜವರಯ್ಯ.

ಕತ್ತೆ ಜವರ : ಯಾಕೋ ಭೋ ಒತ್ತಾಯ ಮಾಡ್ತಾ ಇದ್ದೀರಿ. ಕೇಳಪ್ಪ ಅತ್ತಗೆ.
(ಎನ್ನುತ್ತಿದ್ದಂತೆಯೆ ರಂಗದಲ್ಲಿ ಕತ್ತಲು ಆವರಿಸುತ್ತದೆ. ಮತ್ತೆ ಬೆಳಕು ಮೂಡಿದಾಗ ಅಭಿವೃದ್ಧಿ ಬ್ಯಾಂಕಿನ ಕಛೇರಿಯ ದೃಶ್ಯ. ಬ್ಯಾಂಕಿನ ಕಾರ್ಯದರ್ಶಿಯನ್ನು ಕಾಣಲೆಂದು ಕತ್ತೆ ಜವರ ಅಲ್ಲಿಗೆ ಬರುತ್ತಾನೆ. ಕಾರ್ಯದರ್ಶಿಯು ಕುರ್ಚಿಯೊಂದರಲ್ಲಿ ಕುಳಿತು ಕೆಲವು ಕಾಗದ ಪತ್ರಗಳನ್ನು ಪರಿಶೀಲಿಸುತ್ತಿರುತ್ತಾನೆ.)

ಕತ್ತೆ ಜವರ : ನಮಸ್ಕಾರ ಸ್ವಾಮಿ.

ಕಾರ್ಯದರ್ಶಿ : ನಮಸ್ಕಾರ.... ಏನಯ್ಯ ಸಮಾಚಾರ?

ಕತ್ತೆ ಜವರ : ನಿಮ್ನೆ ನೋಡ್ಕ್ಮ ಅಂತ ಬಂದೆ ಸ್ವಾಮಿ.

ಕಾರ್ಯದರ್ಶಿ : ಏನಾಗ್ಬೇಕಾಗಿತ್ತು?

ಕತ್ತೆ ಜವರ : ಸ್ವಲ್ಪ ಸಾಲ ಬೇಕಾಗಿತ್ತು.

ಕಾರ್ಯದರ್ಶಿ : ಯಾವೂರು? ನಿನ್ನ ಹೆಸರೇನು?

ಕತ್ತೆ ಜವರ : ನಮ್ಮೂರು ಕಾರ್ಕಳ್ಳಿ. ನನ್ನ ಹೆಸರು ಕತ್ತೆ ಜವರ ಅಂತ.

ಕಾರ್ಯದರ್ಶಿ : (ನಗುತ್ತಾ)
ಏನಯ್ಯ, ಹೀಗಿದೆ ನಿನ್ನ ಹೆಸರು ?

ಕತ್ತೆ ಜವರ : ನನ್ನ ಮನೇದು ಒಚ್ಚರಿ ಗೋಡೆ ಉಂಟೋಗದೆ ಸ್ವಾಮಿ. ಆ ಮೋಟು ಗೋಡೆ ತಾವು ನಮ್ಮೂರ ಅಗಸರ ಕತ್ತೆಗಳೆಲ್ಲಾ ಬಂದು ಮುಸುಡಿ ಹಾಕ್ಕೊಂಡು

ನಿಂತ್ಕೋತವೆ. ಅದಕ್ಕೆ ಊರೋರೆಲ್ಲಾ ನನ್ನ ಕತ್ತೆ ಜವರ.... ಕತ್ತೆ ಜವರ ಅಂತ ಕರೀತರೆ ಸ್ವಾಮಿ.

ಕಾರ್ಯದರ್ಶಿ : ಯಾವುದಕ್ಕೆ ಬೇಕಾಗಿತ್ತು ಸಾಲ?

ಕತ್ತೆ ಜವರ : ಒಂದು ಬಾವಿ ತೋಡ್ಸಿ.... ಪಂಪ್‌ಸೆಟ್ ಇಡ್ಸೋಕೆ ಸ್ವಾಮಿ.

ಕಾರ್ಯದರ್ಶಿ : ಬಾವಿ ಯಾಕೆ?

ಕತ್ತೆ ಜವರ : ನಂಗೆ ಒಂದೇ ತಾವು ಮೂರು ಎಕ್ರೆ ಹೊಲ ಅದೆ ಸ್ವಾಮಿ. ಅಲ್ಲಿ ಜಲದ ಕಣ್ಣು ಚೆನ್ನಾಗಿದೆ ಅಂತ ಊರೋರೆಲ್ಲಾ ಹೇಳ್ತಾರೆ. ಅದಕ್ಕೆ ಅಲ್ಲೊಂದು ಬಾವಿ ತೆಗೆಸಿ ಕಬ್ಬು, ಬತ್ತ, ಉಪ್ಪು ನೇರಳೆ ಅಂತ ಒಸಿ ಏನಾರ ಬೆಳ್ಕೊಂಡು, ಹೆಂಗೊ ಕಾಲ ತಳ್ಳೋದು ಅಂತ ಸ್ವಾಮಿ.

ಕಾರ್ಯದರ್ಶಿ : ಸಾಲ ಎಷ್ಟು ಬೇಕಾಗಿತ್ತು?

ಕತ್ತೆ ಜವರ : ಬಾವಿ ತೆಗ್ಸಿ, ಕಲ್ಲು ಕಟ್ಟಡ ಮಾಡ್ಸೋಕೆ ಒಂದು ಹತ್ತು ಸಾವಿರ, ಪಂಪ್‌ಸೆಟ್‌ಗೆ ಒಂದೈದು ಸಾವಿರ. ಎಲ್ಲಾ ಸೇರಿ ಹದಿನೈದು ಸಾವಿರ ಕೊಟ್ರೆ, ಹೆಂಗೋ ಮಾಡ್ಕೋಬೋದು ಸ್ವಾಮಿ.

ಕಾರ್ಯದರ್ಶಿ : ಆ ಮೂರು ಎಕ್ರೆ ಅಲ್ದೆ ಇನ್ನೆಲ್ಲಾದ್ರು ನಿಂಗೆ ಜಮೀನು ಇದೆಯೇನಯ್ಯ?

ಕತ್ತೆ ಜವರ : ಇನ್ನೆಲ್ಲೂ ಇಲ್ಲ ಸ್ವಾಮಿ. ಇರೋದೆ ಮೂರು ಎಕರೆ ಮಾತ್ರ.

ಕಾರ್ಯದರ್ಶಿ : ಹಾಗಾದ್ರೆ ಮೂರು ಎಕ್ರೆ ಮೇಲೆ ಅಷ್ಟೊಂದು ಸಾಲ ಕೊಡೋಕಾಗೋದಿಲ್ಲ ಕಣಯ್ಯ.

ಕತ್ತೆ ಜವರ : ಹಂಗನ್ಬೇಡಿ ಸಾಮಿ. ಹೆಂಗಾರು ಮಾಡ್ಕೊಡಿ.

ಕಾರ್ಯದರ್ಶಿ : ಬರೊದಿಲ್ಲ ಕಣಯ್ಯ. ಅತಿ ಹೆಚ್ಚು ಅಂದ್ರೆ ಹತ್ತು ಸಾವಿರ ರೂಪಾಯಿ ಕೊಡಬಹುದು.

ಕತ್ತೆ ಜವರ : ಹೆಂಗೋ ನಿಮ್ಮ ಪಾದ ಅಂತೀನಿ ಸ್ವಾಮಿ, ಅಷ್ಟನ್ನಾದ್ರು ಬೇಗ ಕೊಡ್ಸಿ.

ಕಾರ್ಯದರ್ಶಿ : ನೀನು ಕೇಳುವಷ್ಟು ಸುಲಭದಲ್ಲಿ ಸಾಲ ಸಿಗೂದಿಲ್ಲ ಕಣಯ್ಯ. ಅದಕ್ಕೆ ಬೇಕಾದ ರೆಕಾರ್ಡ್‌ಸ್‌ನೆಲ್ಲಾ ನೀನು ಒದಗಿಸಿಕೊಡ್ಬೇಕು.

ಕತ್ತೆ ಜವರ : ಏನೇನು ಕೊಡ್ಬೇಕು ಸ್ವಾಮಿ?

ಕಾರ್ಯದರ್ಶಿ : ಆ ಜಮೀನಿಗೆ ಸಂಬಂಧಪಟ್ಟ ಪಹಣಿ ಪಟ್ಟೆ ತಂದು ಕೊಡ್ಬೇಕು. ಖಾತೆ ಮೊದಲ್ಗೊಂಡು ಎಲ್ಲಾ ನಿನ್ನ ಹೆಸರಲ್ಲೇ ಇರ್ಬೇಕು.

ಕತ್ತೆ ಜವರ : ಆಗ್ಲಿ ಸ್ವಾಮಿ. ಇನ್ನೊಂದೆರಡು ದಿನದಲ್ಲಿ ನೀವು ಕೇಳಿದ್ದನ್ನೆಲ್ಲಾ ತಂದು ಕೊಡ್ತೀನಿ. ಆದಷ್ಟು ಬೇಗ ಸಾಲ ಮಂಜೂರು ಮಾಡ್ಬುಡಿ ಸ್ವಾಮಿ.

ಕಾರ್ಯದರ್ಶಿ : (ಅವನ ಆತುರವನ್ನು ಕಂಡು ನಗುತ್ತಾ)
ಸರ್ಕಾರದ ಹಣ ಅಷ್ಟು ಸುಲಭದಲ್ಲಿ ಕೈಗೆ ಬರುತ್ತೆ ಅಂತ ತಿಳ್ಕೊಂಡಿದ್ದಿಯೇನಯ್ಯ?

ಕತ್ತೆ ಜವರ : ಹಂಗಾದ್ರೆ ಸಾಲ ಕೊಡೋಕಾಗೋದಿಲ್ಲ ಅಂತೀರಾ?

ಕಾರ್ಯದರ್ಶಿ : ಕೊಡ್ತೀವಿ ಕಣಯ್ಯ. ನಾವು ಇರೋದೆ ಸಾಲ ಕೊಡೋಕೆ. ಆದರೆ....

ಕತ್ತೆ ಜವರ : ಆದ್ರೆ ಅಂದ್ರೆ ಏನು ಸ್ವಾಮಿ?

ಕಾರ್ಯದರ್ಶಿ : ಯಾವೂರ ದಡ್ಡನಯ್ಯ ನೀನು? ನಿನಗೆ ಎಲ್ಲಾನು ನಾನೇ ಬಿಡ್ಸಿ ಹೇಳ್ಬೇಕಲ್ಲ.

ಕತ್ತೆ ಜವರ : ನಾವು ಏನೂ ತಿಳಿದೆ ಇರೊ ಹಳ್ಳಿ ಮುಕ್ಕುಗೋಳು. ನಿಮ್ಮಂಥ ದೊಡ್ಡೋರ ಮನಸ್ನಲ್ಲಿ ಏನದೆ ಅಂತ ನಮಗೆ ಹೆಂಗೆ ತಿಳ್ದದು? ಅದೇನು ಅಂತ ನೀವೆ ಬಿಡ್ಸಿ ಹೇಳ್ಬುಡಿ ಸ್ವಾಮಿ.

ಕಾರ್ಯದರ್ಶಿ : ನೋಡಯ್ಯ.... ನಮ್ಮ ಆಫೀಸಿನಲ್ಲಿ ನಿನ್ನ ಸಾಲದ ಕಾಗದ ಪತ್ರ ರೆಡಿ ಮಾಡ್ತರಲ್ಲ.... ಆ ಗುಮಾಸ್ತನಿಂದ ಹಿಡಿದು, ಮೇಲ್ಗಡೆ ಸಾಲ ಮಂಜೂರು ಮಾಡ್ತರಲ್ಲ ಆಫೀಸರ್ ತನಕ ಸ್ವಲ್ಪ ಸ್ವಲ್ಪ ದುಡ್ಡು ಕೊಡ್ಲೆಬೇಕು. ನನಗೆ ನೀನೇನು ಕೊಡ್ಬೇಡ. ನಾನೊಂದು ಪೈಸೆನೂ ಮುಟ್ಟೋದಿಲ್ಲ. ನಿಂಗೆ ಬೇಗ ಸಾಲ ಸಿಗ್ಲಿ ಅಂತ ಇಷ್ಟೆಲ್ಲಾ ಹೇಳ್ತ ಇದ್ದೀನಿ.

ಕತ್ತೆ ಜವರ : ಸ್ವಲ್ಪ ದುಡ್ಡು ಕೊಡ್ಬೇಕು ಅಂದ್ರಲ್ಲ, ಎಷ್ಟು ಕೊಡ್ಬೇಕು ಸ್ವಾಮಿ?

ಕಾರ್ಯದರ್ಶಿ : ಐನೂರು ರೂಪಾಯಿ ಆಗುತ್ತೆ.

ಕತ್ತೆಜವರ : ನಾನು ಬಡವ ಸ್ವಾಮಿ, ಅಷ್ಟೊಂದು ದುಡ್ಡನ್ನ ಏಕ್‌ದಂ ಎಲ್ಲಿಂದ ತರನೆ?

ಕಾರ್ಯದರ್ಶಿ : ದುಡ್ಡಿಗೆ ನೀನೇನು ಯೋಚ್ನೆ ಮಾಡ್ಬೇಡ ಕಣಯ್ಯ. ಬಾವಿ ಸಾಲವನ್ನು ನಾವು ಮೂರ್‍ನಾಕು ಕಂತುಗಳಲ್ಲಿ ನಿನಗೆ ಮಂಜೂರು ಮಾಡ್ತೀವಿ. ದುಡ್ಡು ತಕೊವಾಗ್ಲೆಲ್ಲಾ ನೀನು ನಮಗೆ ಕಂತುಗಳಲ್ಲೇ ಕೊಟ್ರು ಆಗುತ್ತೆ.

ಕತ್ತೆ ಜವರ : ಹಂಗೆ ಆಗ್ಲಿ ಸ್ವಾಮಿ. ಸಾಲ ಕೊಡೋವಾಗ್ಲೆಲ್ಲಾ ನೀವೇ ಮುರ್‍ಕೊಂಡು ಕೊಡಿ. ಸ್ವಲ್ಪ ಜಲ್ದಿ ಕೊಟ್ರೆ ಈ ಬ್ಯಾಸ್ಗೇಲೆ ಬಾವಿ ತೆಗ್ಸಿಬುಡ್ತೀನಿ ಸ್ವಾಮಿ.

ಕಾರ್ಯದರ್ಶಿ : ಆಗ್ಲಿ ಕಣಯ್ಯ. ನಿಂಗ್ಯಾಕೆ ಹೋಗು. ಎಲ್ಲಾ ರೆಕಾರ್ಡ್ಸ್ ತಗೊಂಡು ಬಾ. ನಾನೇ ಖುದ್ದಾಗಿ ನಿಂತು ಮಾಡ್ಸಿಕೊಡ್ತೀನಿ.

ಕತ್ತೆ ಜವರ : ನಿಮ್ಮ ಉಪ್ಕಾರನ ನಾನು ಯಾವತ್ತು ಮರೆಯೋದಿಲ್ಲ ಸ್ವಾಮಿ....
(ಎಂದು ಕೈಮುಗಿಯುತ್ತಾ ಅಲ್ಲಿಂದ ನಿರ್ಗಮಿಸುತ್ತಾನೆ. ರಂಗದ ಮೇಲೆ ಕತ್ತಲು ಕವಿಯುತ್ತದೆ. ಮತ್ತೆ ಬೆಳಕು ಮೂಡಿದಾಗ ತಾಲ್ಲೂಕು ಕಛೇರಿಯ ದೃಶ್ಯ. ಅಲ್ಲೊಂದು ಕೊಠಡಿಯೊಂದರಲ್ಲಿ ಕತ್ತೆ ಜವರನ ಗ್ರಾಮಕ್ಕೆ ಸಂಬಂಧಪಟ್ಟ ಗ್ರಾಮಲೆಕ್ಕಿಗ ಕುಳಿತಿರುತ್ತಾನೆ. ಅಲ್ಲಿಗೆ ಅವನನ್ನು ಕಾಣಲೆಂದು ಕತ್ತೆಜವರ ಬರುತ್ತಾನೆ.)

ಕತ್ತೆ ಜವರ : ಇದೇನ್ ಸ್ವಾಮಿ ಇಲ್ಲಿ ಕುಂತ್ಬುಟ್ರಿ. ನಿಮ್ಮ ನೋಡ್ಮ ಅಂತ ಊರಲ್ಲಿ ಕಾದು ಕಾದು ಸಾಕಾಗ್ಹೋಯ್ತು. ನೀವು ಹದಿನೈದು ದಿನದಿಂದ ಅತ್ತಗೆ ತಲೇನೆ ಹಾಕ್ಲಿಲ್ಲ.

ಗ್ರಾಮ ಲೆಕ್ಕಿಗ : ಬೆಂಗಳೂರಿನಲ್ಲಿ ಟ್ರೈನಿಂಗ್ ಇತ್ತು ಕಣಯ್ಯ. ಅಲ್ಲಿಗೆ ಹೋಗಿದ್ದೆ.

ಕತ್ತೆ ಜವರ : ನನ್ನ ಹೊಲದ್ದು ಒಸಿ ಪಾಣಿ ಪಟ್ಟೆ ಬೇಕಾಗಿತ್ತು.

ಗ್ರಾಮ ಲೆಕ್ಕಿಗ : ಯಾಕಯ್ಯ ಪಹಣಿ ಪಟ್ಟೆ?

ಕತ್ತೆ ಜವರ : ಬಾವಿ ಸಾಲಕ್ಕೆ ಅರ್ಜಿ ಹಾಕ್ಮ ಅಂತ ಸ್ವಾಮಿ.

ಗ್ರಾಮ ಲೆಕ್ಕಿಗ : ನೀನೂ ಸಾಲಕ್ಕೆ ನಿಂತ್ಬುಟ್ಟೆ ಅನ್ನಪ್ಪ.

ಕತ್ತೆ ಜವರ : ಇನ್ನೇನು ಮಾಡಿರಿ, ಹಾಳಾದ ಈ ಮಳೆ ನಂಬ್ಕೊಂಡು ಬೇಸಾಯ ಮಾಡೋಕಾಗೋದಿಲ್ಲ. ಬಡ್ಡತ್ತದ್ದು ಉದ್ರೆ ಊರೆಲ್ಲಾ ಕೊಚ್ಕೊಂಡು ಹೋಗುವಂಗೆ ಉದೆಬುಡ್ತದೆ, ಇಲ್ದೆ ಹೋದ್ರೆ ಹೊಂಟೆಹೋಯ್ತದೆ. ಅದ್ಕೆ ಒಂದು ಬಾವಿನಾರ ಮಾಡಿಸ್ಕೊಂಡ್ರೆ, ಒಸಿ ಬೆಳೆ ಕೈಹತ್ತದೇನೊ ಅಂತ.

ಗ್ರಾಮ ಲೆಕ್ಕಿಗ : ಮಾಡ್ಸು.... ಮಾಡ್ಸು, ಒಂದು ಬಾವಿ ಅಂತ ಇದ್ರೆ ಯಾವುದಕ್ಕು ಒಳ್ಳೇದೆ ಕಣ. ನಿನ್ನ ಹೊಲದ ಸರ್ವೆ ನಂಬರ್ ಎಷ್ಟು?

ಕತ್ತೆ ಜವರ : ನೂರ ಐವತೊಂಬತ್ತು

ಗ್ರಾಮ ಲೆಕ್ಕಿಗ : (ಪಹಣಿ ಪುಸ್ತಕವನ್ನು ತೆಗೆದು ಹಾಳೆಗಳನ್ನು ಒಂದೊಂದಾಗಿ ತೆಗೆದು ನೋಡುತ್ತಾ)
ಪೋಡು ಎಷ್ಟು ಅಂತ ಗೊತ್ತೇನಯ್ಯ?

ಕತ್ತೆ ಜವರ : ಎರಡೋ.... ಮೂರೋ ಇರ್ಬೇಕು ನೋಡಿ.

ಗ್ರಾಮ ಲೆಕ್ಕಿಗ : (ರಾಗವಾಗಿ ಓದುತ್ತಾ)
ಸರ್ವೆ ನಂಬರ್ ನೂರ ಐವತೊಂಬತ್ತು, ಎರಡನೇ ಪೋಡಿನಲ್ಲಿ ಮೂರು ಎಕರೆ.... ಖಾತೆದಾರ ಓಣಿ ನಿಂಗಯ್ಯ.

ಓಣಿ ನಿಂಗಯ್ಯ: (ತಲೆ ಎತ್ತಿ)
ನಿಮ್ಮಪ್ಪನ ಹೆಸರೇನಯ್ಯ?

ಕತ್ತೆ ಜವರ : ಪುಕ್ಸಟ್ಟೆ ಬೋರಯ್ಯ.

ಗ್ರಾಮ ಲೆಕ್ಕಿಗ : ನಿಮ್ಮ ತಾತನ ಹೆಸರು?

ಕತ್ತೆ ಜವರ : ಓಣಿ ನಿಂಗಯ್ಯ.

ಗ್ರಾಮ ಲೆಕ್ಕಿಗ : ಇದೇನಯ್ಯ, ಖಾತೆ ಇನ್ನೂ ನಿಮ್ಮ ತಾತನ ಹೆಸರಲ್ಲೆ ಅದಲ್ಲಯ್ಯ? ನಿಮ್ಮಪ್ಪ ಯಾವತ್ತು ಇತ್ತಗೆ ತಿರುಗಿ ನೋಡ್ಲಿಲ್ಲ ಅಂತ ಕಾಣ್ತದೆ.

ಕತ್ತೆ ಜವರ : ಆ ಪಾಯಿ ಯಾವತ್ತು ನಮ್ಮೂರು ಬುಟ್ಟು ಪೇಟೆಗೆ ಬಂದೋನೆ ಅಲ್ಲ. ನಮ್ಮ ರೈತಾಪಿ ಜನಕ್ಕೆ ಇದೆಲ್ಲ ನಿಗಾ ಎಲ್ಲಿದ್ದದು ಸ್ವಾಮಿ? ಹಿಂಗೆ ಯಾವುದಾದ್ರು ಸಾಲ ಸೋಲಕ್ಕೆ ಬಂದಾಗ್ಲೆ, ಖಾತೆ ಯಾರ ಹೆಸರಲ್ಲಿದೆ? ಖಿರ್ದಿ ಯಾರ ಹೆಸರಲ್ಲಿದೆ ಅಂತ ಗೊತ್ತಾಗುದು.

ಗ್ರಾಮ ಲೆಕ್ಕಿಗ : ನಿಮ್ಮ ತಾತನ ಜೊತೇಲಿ ಹುಟ್ಟೋರು ಎಷ್ಟು ಜನವಯ್ಯ?

ಕತ್ತೆ ಜವರ : ನಮ್ಮ ತಾತನ ಒಡಹುಟ್ಟು ಯಾರು ಇಲ್ಲ. ನಮ್ಮಪ್ಪನ ಜೊತೇಲಿ ಹುಟ್ಟೋರು ಇಲ್ಲ, ನಾನು ಒಬ್ಬನೇ ಮಗ.

ಗ್ರಾಮ ಲೆಕ್ಕಿಗ : ನಿಮ್ಮಪ್ಪ ಇದ್ದನೋ?

ಕತ್ತೆ ಜವರ : ನಮ್ಮಪ್ಪ ಸತ್ತು ಆಗ್ಲೆ ಹತ್ತು ವರ್ಷದ ಮೇಲಾಗ್ಹೋಯ್ತು. ನಮ್ಮವ್ವ ಸತ್ತು ಈ ಮಾರ್ಲಮಿಗೆ ನಾಲ್ಕು ವರ್ಷ ಆಯ್ತು. ನನ್ನ ಆಸ್ತಿಗೆ ಯಾವ ದಾಯಾದಿ ವ್ಯಾಜ್ಯಾನು ಇಲ್ಲ. ಯಾರ ತಕರಾರು ಇಲ್ಲ. ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡ್ಬುಡಿ ಬುದ್ಧಿ.

ಗ್ರಾಮ ಲೆಕ್ಕಿಗ : ನೀನು ಹೇಳ್ದೆ ಅಂತ ಈಗ್ಲೆ ಬರೆದುಬುಡುಕೆ ಆಗುತ್ತಾ? ಅದ್ಕೇನು ಕಾನೂನು ಕಟ್ಲೆ, ನೀತಿ ನಿಯಮ ಏನೂ ಇಲ್ಲ ಅಂತ ತಿಳ್ಕೊಂಡ?

ಕತ್ತೆ ಜವರ : ನೀವು ಮನಸ್ಸು ಮಾಡುದ್ರೆ, ಅದೆಷ್ಟು ಹೊತ್ತಿನ ಕೆಲ್ಸ, ಸ್ವಲ್ಪ ಜಲ್ದಿ ಬರ್ಕೊಡಿ ಸ್ವಾಮಿ.

ಗ್ರಾಮ ಲೆಕ್ಕಿಗ : ನಿಮ್ಮ ತಾತನ ಹೆಸರಲ್ಲಿ ಇರೋದ್ನ, ಏಕ್‌ದಂ ನಿನ್ನ ಹೆಸರಿಗೆ ಬರೆಯೋಕೆ ಆಗೂದಿಲ್ಲ.

ಕತ್ತೆ ಜವರ : ಹಂಗಾರೆ ಈಗೇನು ಮಾಡೋದು ಸ್ವಾಮಿ, ಪಾಣಿ ಪಟ್ಟೆ ಕಡ್ಡಾಯವಾಗಿ ಬೇಕೆ ಬೇಕಂತಲ್ಲ.

ಗ್ರಾಮ ಲೆಕ್ಕಿಗ : ಈಗ ನಿಮ್ಮ ತಾತನ ಹೆಸರಲ್ಲಿ ಇರುವಂಗೆ ಕೊಡ್ತೀನಿ. ತಕೊಂಡು ಹೋಗು.

ಕತ್ತೆ ಜವರ : ಸಾಲ ತಕೋಬೇಕಾದ್ರೆ ನನ್ನ ಹೆಸರಲ್ಲೇ ಇರ್ಬೇಕಂತಲ್ಲ ಸ್ವಾಮಿ. ನೀವು ಕಾಣ್ರಿ?

ಗ್ರಾಮ ಲೆಕ್ಕಿಗ : ಅದಕ್ಕೆ ನಾನೇನು ಮಾಡ್ಲಿ? ಈಗ ತಕ್ಷಣಕ್ಕೆ ಖಾತೆ ಬದಲಾವಣೆ ಆಗೋದಿಲ್ಲ ಕಣ ಹೋಗಯ್ಯ.

ಕತ್ತೆ ಜವರ : ಸ್ವಲ್ಪ ಏನೋ ನೋಡಿ ಸ್ವಾಮಿ, ಹಂಗೆ ತಲೆ ಒಗಿಬ್ಯಾಡಿ.

ಗ್ರಾಮ ಲೆಕ್ಕಿಗ : ಏನು ನೋಡುವಂಗು ಇಲ್ಲ; ತೋಡುವಂಗು ಇಲ್ಲ. ಸುಮ್ಮನೆ ಎದ್ದು ಹೋಗಯ್ಯ.

ಕತ್ತೆ ಜವರ : ಸ್ವಾಮಿ.... ಸ್ವಾಮಿ ಹೆಂಗಾರ ಮಾಡಿ ಸ್ವಾಮಿ.

ಗ್ರಾಮ ಲೆಕ್ಕಿಗ : ನೋಡಯ್ಯ, ನಿನ್ನ ಜೊತೆಲೇನು ಮುಚ್ಚುಮರೆ. ಈಗ ತಕ್ಷಣಕ್ಕೆ ನಿನ್ನ ಕೆಲ್ಸ ಆಗ್ಬೇಕು ಅಂದ್ರೆ ಸ್ವಲ್ಪ ದುಡ್ಡು ಖರ್ಚಾಗುತ್ತೆ.

ಕತ್ತೆ ಜವರ : ಎಷ್ಟಾಗುತ್ತೆ?

ಗ್ರಾಮ ಲೆಕ್ಕಿಗ : ನೂರೈವತ್ತು ಆಗುತ್ತೆ.

ಕತ್ತೆ ಜವರ : ಅಷ್ಟೊಂದು ದುಡ್ಡು ಎಲ್ಲಿಂದ ತರನೆ? ಸ್ವಲ್ಪ ಕಮ್ಮಿ ಮಾಡ್ಕೊಳ್ಳಿ ಸ್ವಾಮಿ.

ಗ್ರಾಮ ಲೆಕ್ಕಿಗ : ಆಗೋಲ್ಲ ಕಣಯ್ಯ.

ಕತ್ತೆ ಜವರ : ನೂರು ರೂಪಾಯಿ ಮಾಡ್ಕೊಳ್ಳಿ ಸ್ವಾಮಿ.

ಗ್ರಾಮ ಲೆಕ್ಕಿಗ : ಖಾತೆ ಬದಲಾವಣೆ ಅಂದ್ರೆ ಪುಕ್ಸಟ್ಟೆ ಪುಉಗು ಅಂತ ತಿಳ್ಕೊಂಡಿದ್ದೀಯಾ? ಅದಕ್ಕೆ ಬಹಳ ಖರ್ಚಾಗುತ್ತೆ ಕಣಯ್ಯ.

ಕತ್ತೆ ಜವರ : ಅದೇನೋ ಎಲ್ಲಾ ನಿಮಗೆ ಬುಟ್ಟದ್ದೆ. ನೀವು ನೂರಕ್ಕೆ ಒಪ್ಕೊಳ್ಳಬೇಕು. ನಿಮಗೆ ಕೈ ಮುಗೀತೀನಿ ಹೆಂಗಾರ ಮಾಡ್ಕೊಡಿ ಸ್ವಾಮಿ.

ಗ್ರಾಮ ಲೆಕ್ಕಿಗ : ನಿನ್ನ ನೋಡುದ್ರೆ ಯಾಕೋ 'ಅಯ್ಯೋ' ಅನ್ಸುತ್ತೆ ಕಣಯ್ಯ ಆಗ್ಲಿ ಮಾಡ್ಕೊಡ್ತೀನಿ, ಕೊಡು ಮತ್ತೆ ದುಡ್ಡ.

ಕತ್ತೆ ಜವರ : ಈಗ ಊರ್ಗೆ ಹೋಗ್ಬುಟ್ಟು, ಎಲ್ಲಾರ ಅಮರಿಸ್ಕೊಂಡು, ನಾಳೆ ಇಷ್ಟೊತ್ತಿಗೆ ದುಡ್ಡ ತಕೊಂಡು ಬರ್ತೀನಿ. ನೀವು ಅಷ್ಟೊತ್ತಿಗೆ ರೆಡಿ ಮಾಡ್ಬುಡಿ ಸ್ವಾಮಿ.

ಗ್ರಾಮ ಲೆಕ್ಕಿಗ : ಓಹೋ, ಬರಿ ಕೈಲೆ ಬಂದ್ಬುಟ್ಟಿದ್ದ ಸರ್ದಾರನಂಗೆ? ಹೋಗು ಮೊದಲು ನೀನು ದುಡ್ಡು ತಕೊಂಡು ಬರೋಗು.

ಕತ್ತೆ ಜವರ : ದುಡ್ಡು ತಕೊಂಡೆ ಬತ್ತೀನಿ. ನಾ ಬರೋವೊತ್ಗೆ ನೀವು ಎಲ್ಲಾನು ಬರ್ದು ಇಟ್ಟಿರಿ ಸ್ವಾಮಿ.

(ಗ್ರಾಮ ಲೆಕ್ಕಿಗನಿಗೆ ಅತ್ಯಂತ ದೈನ್ಯತೆಯಿಂದ ಕೈಮುಗಿಯುತ್ತಾ ಅಲ್ಲಿಂದ ನಿರ್ಗಮಿಸುತ್ತಿದ್ದಂತೆಯೇ, ರಂಗದ ಮೇಲೆ ಕತ್ತಲು ಕವಿಯುತ್ತದೆ. ಪುನಃ ರಂಗದ ಮೇಲೆ ಬೆಳಕು ಹರಡಿದಾಗ, ಗಿರವಿ ಅಂಗಡಿಯ ದೃಶ್ಯ. ಚೀಲವೊಂದನ್ನು ಹಿಡಿದುಕೊಂಡು ಕತ್ತೆ ಜವರ ಅಲ್ಲಿಗೆ ಬರುತ್ತಾನೆ.)

ಸೇಟು : ಅರೆ ನಿಮ್ದೂಕೆ ಏನಾಗ್ಬೇಕಾಗಿತ್ತು?

ಕತ್ತೆ ಜವರ : ನಂಗೊಸಿ ಸಾಲ ಬೇಕಾಗಿತ್ತು.

ಸೇಟು : ಏನ್ ತಂದಿದ್ದೀಯ? ಚಿನ್ನ.... ಬೆಳ್ಳಿ....

ಕತ್ತೆ ಜವರ : ಚಿನ್ನ.... ಬೆಳ್ಳಿ ಯಾವ ಬಡ್ಡಿ ಹೈದ ಕಂಡಿದ್ದನು? ತಕೊಳಯ್ಯ ಸೇಟು.

(ಎಂದು ಹೇಳುತ್ತಾ ಚೀಲದಿಂದ ಒಂದು ಕಂಚಿನ ಬಿಂದಿಗೆ ಮತ್ತು ಎರಡು ಸ್ಟೀಲ್ ತಟ್ಟೆಗಳನ್ನು ಸೇಟುವಿನ ಮುಂದೆ ಇಡುತ್ತಾನೆ.)

ಸೇಟು : ಕಂಚಿನ್ದು ಬಿಂದಿಗೆ. ಇಸ್ಟೀಲ್ದ್ ತಟ್ಟೆ. ಇದ್ಕೆ ಯಾರು ಕೊಡ್ತಾರೆ ಸಾಲ? ಆಗೋದಿಲ್ಲ ಹೋಗು.

ಕತ್ತೆ ಜವರ : ಅಯ್ಯೋ.... ಸ್ವಲ್ಪ ಮೆತ್ತಗೆ ಮಾತಾಡಯ್ಯ.

ಸೇಟು : ಯಾಕೆ ಹೆದರ್ತಿ? ಕಳ್ತನದ್ದು ಮಾಲು?

ಕತ್ತೆ ಜವರ : ನಂದೆ ಕಣಯ್ಯ. ಹಿಂಗೆ ಪಾತ್ರೆ ಪನಾಸ್ನೆಲ್ಲ ಗಿರವಿ ಇಡೂದ ಯಾರಾರ ಅಪ್ಪಂತವ್ರು ಕಂಡರೂ ಅಂತ ಭಯ.

ಸೇಟು : ನಿಂದು ಹೆಸರೇನು?

ಕತ್ತೆ ಜವರ : ಕತ್ತೆ ಜವರ.

ಸೇಟು : ಕಟ್ಟೆ ಜವರ
(ನಗತೊಡಗುತ್ತಾನೆ)

ಕತ್ತೆ ಜವರ : ಕಟ್ಟೆಯೋ.... ಕತ್ತೆಯೋ.... ಯಾವುದೋ ಒಂದು. ನೋಡಯ್ಯ ನಂಗೀಗ ಅರ್ಜೆಂಟಾಗಿ ದುಡ್ಡು ಬೇಕಾಗಿದೆ. ಮೊದ್ಲು ಇವ ಒಳಾಕೆ ಇಟ್ಕೊಳಯ್ಯ.

ಸೇಟು : ನೈ ಕಟ್ಟೆ ಜವರ. ಇದಕ್ಕೆ ನಮ್ಮದು ಸಾಲ ಕೊಡೋದಿಲ್ಲ. ಈ ಕಚಡಾ ಮಾಲು ನಮ್ದೂಕೆ ಬೇಕಾಗಿಲ್ಲ.

ಕತ್ತೆ ಜವರ : ಹಂಗೆ ತಲೆ ಒಗೀಬೇಡ ಸೇಟು. ಒಂದೇ ಒಂದು ತಿಂಗಳಲ್ಲಿ ನಿನ್ನ ಸಾಲ ತೀರಿಸ್ಬುಟ್ಟು ಇವ ಬುಡ್ಸುಕೊಂಡು ಹೋಗ್ತೀನಿ. ಈಗ ನಂಗೆ ಹಣ ಬೇಕೆ ಬೇಕು ಕಣಯ್ಯ.

ಸೇಟು : ಎಷ್ಟು ಬೇಕಾಗಿತ್ತು ಹಣ.

ಕತ್ತೆ ಜವರ : ನೂರೈವತ್ತು ರೂಪಾಯಿ.

ಸೇಟು : ಇದ್ರುದು ಬೆಲೇನೆ ಅಷ್ಟಾಗೋದಿಲ್ಲ.

ಕತ್ತೆ ಜವರ : ಇದೇನಯ್ಯ ಹಿಂಗಂತಿ! ಕಂಚನ್ದು ಬಿಂದಿಗೆ ಬೆಲೆ ಎಷ್ಟದೆ ಗೊತ್ತೆ ನಿಂಗೆ? ಇವೆರಡು ಸ್ಟೀಲ್ ತಟ್ಟೆಗಳು ಕಣಯ್ಯ.

ಸೇಟು : ನೋಡು ಕಟ್ಟೆ ಜವರ, ನೀನು ಕೇಳುವಷ್ಟು ಸಿಗೋದಿಲ್ಲ. ಎಪ್ಪತ್ತೈದು ಸಿಗ್ತದೆ ಅಷ್ಟೆ.

ಕತ್ತೆ ಜವರ : ಹೋಗ್ಲಿ.... ನೂರು ರೂಪಾಯ್ನಾರ ಕೊಡಯ್ಯ.

ಸೇಟು : ನೈ ಕಟ್ಟೆ ಜವರ.

ಕತ್ತೆ ಜವರ : ಸೇಟು, ನಿನ್ನ ದಮ್ಮಯ್ಯ ಅಂತೀನಿ. ಭೋ ಅರ್ಜೆಂಟಾಗಿ ನೂರು ಬೇಕೇ ಬೇಕು ಕಣಯ್ಯ.

ಸೇಟು : ನಿಂದು ಕಷ್ಟ ನೋಡಿ ಕೊಡ್ತಾ ಇದ್ದೀನಿ. ನೋಡು ಇಲ್ಲಿ.... ಸಾಲ ನೂರು ರೂಪಾಯಿ. ಇದರೊಳಗೆ ಐದು ರೂಪಾಯಿ ಮೊದಲನೇ ತಿಂಗಳು ಬಡ್ಡಿ ಮುರ್ಕೊಂಡು ತೊಂಬತ್ತೈದು ಕೊಡ್ತಾ ಇದ್ದೀನಿ. ಪ್ರತಿ ತಿಂಗಳು ಐದು ರೂಪಾಯಿ

ಬಡ್ಡಿ ಕಟ್ಕೊಂಡು ಬರ್ಬೇಕು. ಒಂದು ವರ್ಷದ ಕೊನೇಲಿ ಪೂರ್ತಿ ಹಣ ಕೊಟ್ಟು ಮಾಲು ಬುಡಿಸ್ಕೊಂಡು ಹೋಗ್ಬೇಕು. ಇಲ್ದಿದ್ರೆ ನಿಂದು ಸಾಮಾನು ಹರಾಜು ಆಗ್ಹೋಯ್ತದೆ, ಗೊತ್ತಾಯ್ತು.

ಕತ್ತೆ ಜವರ : ಗೊತ್ತಾಯ್ತು ದುಡ್ಡು ಕೊಡಯ್ಯ.

ಸೇಟು : (ಬಿಂದಿಗೆ ಮತ್ತು ತಟ್ಟೆಗಳನ್ನು ಚೆನ್ನಾಗಿ ನೋಡಿ, ಒಳಗೆ ಇಟ್ಟುಕೊಂಡು)
ಹತ್ತು.... ಇಪ್ಪತ್ತು.... ಮುವತ್ತು....
(ಎಂದು ಹೇಳುತ್ತಾ ಹಣವನ್ನು ಕತ್ತೆ ಜವರನಿಗೆ ಕೊಡುತ್ತಿದ್ದಂತೆಯೇ ರಂಗದ ಮೇಲೆ ಕತ್ತಲು ಕವಿಯುತ್ತದೆ. ಮತ್ತೆ ರಂಗದ ಮೇಲೆ ಬೆಳಕು ಮೂಡಿದಾಗ ತಾಲ್ಲೂಕು ಕಛೇರಿಯ ದೃಶ್ಯ.)

ಕತ್ತೆ ಜವರ : ಬರ್ದಾಯ್ತೆ ಸ್ವಾಮಿ?

ಗ್ರಾಮ ಲೆಕ್ಕಿಗ : ದುಡ್ಡು ತಂದಿದ್ದೀಯ?

ಕತ್ತೆ ಜವರ : ತಕೊಳಿ ಸ್ವಾಮಿ
(ಹಣವನ್ನು ಕೊಡುತ್ತಾನೆ)

ಗ್ರಾಮ ಲೆಕ್ಕಿಗ : (ನೋಟುಗಳನ್ನು ಎಣಿಸುತ್ತಾ)
ಎಷ್ಟು ಇದೆಯಯ್ಯ ಇಲ್ಲಿ?

ಕತ್ತೆ ಜವರ : ಐವತ್ತು ಅದೆ ಸ್ವಾಮಿ.

ಗ್ರಾಮ ಲೆಕ್ಕಿಗ : (ಆ ನೋಟುಗಳನ್ನು ತೂದು ನೆಲದ ಮೇಲೆ ಬಿಡಾಡುತ್ತ)
ಏನು ಕಡ್ಲೆಪುರಿ ವ್ಯಾಪಾರ ಅಂತ ತಿಳ್ಕೊಂಡಿದ್ದೀಯ? ಎತ್ಕೊಂಡ್ಹೋಗಯ್ಯ.

ಕತ್ತೆ ಜವರ : (ಚೆಲ್ಲಾಡಿದ್ದ ನೋಟುಗಳನ್ನು ಎತ್ತಿಕೊಂಡು ಕಣ್ಣಿಗೆ ಒತ್ತಿಕೊಳ್ಳುತ್ತ)
ನಿಮ್ಮಂಥವ್ರೆ ಹಿಂಗೆ ಕೋಪ ಮಾಡ್ಕೊಂಡ್ರೆ, ನನ್ನಂಥ ಬಡಬಗ್ಗರು ಬದ್ಕೋದು ಹೆಂಗೆ ಸ್ವಾಮಿ?

ಗ್ರಾಮ ಲೆಕ್ಕಿಗ : ನೀನು ಬಡವನೊ? ಹತ್ತು ಹದಿನೈದು ಸಾವಿರ ರೂಪಾಯನ್ನು ಕೈತುಂಬಾ ಎಣಿಸಿಕೊಳುದಿಲ್ವೆ ಈಗ?

ಕತ್ತೆ ಜವರ : ಸಾಲ ನನ್ನ ಕೈಗೆ ಬಂದಾಗ ತಾನೆ ಆ ಮಾತು.
(ತನ್ನ ಚಡ್ಡಿ ಜೇಬಿನಿಂದ ಹತ್ತು ರೂ. ನೋಟೊಂದನ್ನು ತೆಗೆದು, ಮೊದಲಿನ ನೋಟುಗಳ ಜೊತೆ ಜೋಡಿಸಿ)

ಹೋಗ್ಲಿ ತಗೊಳಿ ಸ್ವಾಮಿ.

ಗ್ರಾಮ ಲೆಕ್ಕಿಗ : (ಕೈಗೆ ತೆಗೆದುಕೊಳ್ಳದೆ).

ಅದೆಷ್ಟು ಇದ್ದದು ಹೇಳು?

ಕತ್ತೆ ಜವರ : ಅರವತ್ತು ಅದೆ ಕಣ, ತಗೊಳಿ ಸ್ವಾಮಿ.

ಗ್ರಾಮ ಲೆಕ್ಕಿಗ : ನೋಡಯ್ಯ ನಿನ್ನ ಜೊತೇಲಿ ಚಕ್ಕಂದ ಆಡೋಕೆ ನಂಗೆ ಬಿಡ್ತಿ ಇಲ್ಲ. ನೂರು ರೂಪಾಯಿಗೆ ಒಂದು ಪೈಸೆ ಕಡಿಮೆ ಆದ್ರೂ ಖಾತೆ ಬದಲಾವಣೆ ಆಗೋದಿಲ್ಲ ಹೋಗು. ಎದ್ದು ನಡೀತಾ ಇರು.

ಕತ್ತೆ ಜವರ : ನೀವು ಹಿಂಗಂದುಬುಟ್ರೆ ಹೆಂಗೆ ಸ್ವಾಮಿ. ನಿಮ್ಮ ದಮ್ಮಯ್ಯ ಅಂತೀನಿ ಬರ್ಕೊಡಿ ಸ್ವಾಮಿ.
(ಎನ್ನುತ್ತಾ ಕೈ ಮುಗಿಯುತ್ತಾನೆ.)

ಗ್ರಾಮ ಲೆಕ್ಕಿಗ : ನೀನು ಕೈ ಮುಗಿದ್ರು ಇಲ್ಲ; ಕಾಲಿಗೆ ಬಿದ್ರು ಇಲ್ಲ, ಎದ್ದು ಹೋಗಯ್ಯ. ನೀನು ಕೊಡು ದುಡ್ನೆಲ್ಲಾ ನಾನೊಬ್ನೆ ನುಂಗ್ಕೊತಿನಿ ಅಂತ ತಿಳ್ಕೊಂಡಿದ್ದೀಯ? ರೆವಿನ್ಯೂ ಇನ್‌ಸ್ಪೆಕ್ಟರ್ಗೆ ಕೊಡ್ಬೇಕು, ಶಿರಸ್ತೇದಾರರ ಬಾಯ್ಗೆ ಇಕ್ಬೇಕು, ತಹಶೀಲ್ದಾರರ ಸೇವೆ ಮಾಡ್ಬೇಕು. ನಿಂಗೇನು ಗೊತ್ತು ನನ್ನ ಕಷ್ಟ, ಎದ್ದು ಹೋಗು.

ಕತ್ತೆ ಜವರ : (ಮೂವತ್ತು ರೂಪಾಯಿಗಳನ್ನು ಚಡ್ಡಿ ಜೇಬಿನಿಂದ ತೆಗೆದು, ಎಲ್ಲಾ ನೋಟುಗಳನ್ನು ಜೋಡಿಸಿ)
ಹೋಗ್ಲಿ ತಗೊಳಿ ಸ್ವಾಮಿ.

ಗ್ರಾಮ ಲೆಕ್ಕಿಗ : ಎಷ್ಟಿದ್ದದು?

ಕತ್ತೆ ಜವರ : ತೊಂಬತ್ತು ರೂಪಾಯಿ ಅದೆ ಸ್ವಾಮಿ. ನನ್ನ ಚಮ್ಮಡ ಸುಲ್ದು ಬುಟ್ರು ನನ್ತಾವು ಇನ್ನು ಒಂದು ಪೈಸೇನೂ ಇಲ್ಲ.

ಗ್ರಾಮ ಲೆಕ್ಕಿಗ : ಹೋಗ್ಲಿ ಕೊಡು.

(ಹಣವನ್ನು ತೆಗೆದುಕೊಂಡು, ಎಣಿಸಿಕೊಂಡು, ಅನಂತರ ದಾಖಲೆಗಳನ್ನು ನೀಡುತ್ತಾ)

ಎಲ್ಲಾ ಬಂದೋಬಸ್ತಾಗಿ ಬರೆದುಕೊಟ್ಟಿದ್ದೀನಿ. ತಕೊಂಡು ಹೋಗು. ಇದನ್ನ ಕೊಟ್ಟ ತಕ್ಷಣವೆ ಯಾವ ತಕರಾರು ಇಲ್ಲದೆ ಸಾಲ ಸಿಗ್ತದೆ.

ಕತ್ತೆ ಜವರ : ಇನ್ನೇನಾದ್ರು ದಾಖಲೆ ಗೀಕಲೆ ಬೇಕು ಅಂತ ತಿರ್ಗೇನಾದ್ರು ಆ ಬ್ಯಾಂಕಿನೋರು ಕೇಳುದ್ರೆ ಎಲ್ಲಿ ಸಿಕ್ಕಿರಿ ಸ್ವಾಮಿ?

ಗ್ರಾಮ ಲೆಕ್ಕಿಗ : ನಾನು ಇನ್ನೆಂಟು ದಿನ ಊರ್ನಲ್ಲಿ ಇರೋದಿಲ್ಲ ಕಣಯ್ಯ. ತಿರುಪತಿಗೆ ಹೊಯ್ತ ಇದ್ದೀನಿ.

ಕತ್ತೆ ಜವರ : ತಿರುಪತಿ ದರ್ಶನಕ್ಕೆ ಹೋಗ್ತಾ ಇದ್ದೀರಾ? ಹೋಗ್ಬುಟ್ಟು ಬನ್ನಿ. ನಿಮ್ಮಂಥ ಪುಣ್ಯಾತ್ಮರು ಆ ದೇವರ ದರ್ಶನ ಮಾಡ್ಲೇಬೇಕು.

ಗ್ರಾಮ ಲೆಕ್ಕಿಗ : ನನಗೆ ಆ ದೇವರಲ್ಲಿ ಭೋ ನಂಬಿಕೆ ನೋಡು. ವರ್ಷಕ್ಕೆ ಎರಡು ಸತಿ.... ತಪ್ಪುದ್ರೆ ಒಂದು ಸತಿನಾದ್ರು ತಿರುಪತಿ ಯಾತ್ರೆ ಮಾಡ್ದೆ ಇದ್ರೆ, ನನ್ನ ಮನಸ್ಸಿಗೆ ಸಮಾಧಾನವೆ ಇರೋದಿಲ್ಲ.

ಕತ್ತೆ ಜವರ : ಆ ಭಗವಂತನ ಮಹಿಮೆ ಹಂಗದೆ ಸ್ವಾಮಿ. ನಿಮ್ಮಂಥ ಭಕ್ತರ ಎಲ್ಲಿದ್ರು ಬುಡ್ದೆ ಅವನೆ ಕರಿಸ್ಕೊತನೆ.

(ಒಂದು ಗಳಿಗೆ ಏನನ್ನೋ ಯೋಚಿಸುತ್ತಿದ್ದು, ಅನಂತರ ತನ್ನ ಚಡ್ಡಿ ಜೇಬಿನಿಂದ ಐದು ರೂಪಾಯನ ಒಂದು ನೋಟನ್ನು ಹೊರಕ್ಕೆ ತೆಗೆದು)

ನಮ್ಮ ಹೈಕ್ಳಗೆ ಕಡ್ಲೆಪುರಿ ತಕೊಂಡು ಹೋಗ್ಬೇಕು ಅಂತ ಈ ದುಡ್ಡ ಇಟ್ಕೊಂಡಿದ್ದೆ. ಅವ್ಕೇನು ಇವತ್ ಇಲ್ಲದೇ ಇದ್ರೆ, ನಾಳಾಕಾದ್ರು ತಿನ್ತವೆ. ತಕೊಳಿ ಸ್ವಾಮಿ ಈ ಐದು ರೂಪಾಯ್ನ "ಕತ್ತೆ ಜವರನ ಮನೆ ರಾಮೋಕ್ಷವಾಗಿ ಬದುಕುವಂಗೆ ಆಗಲಿ" ಅಂತ ಅಂದ್ಬುಟ್ಟು, ತಿರುಪತಿ ತಿಮ್ಮಪ್ಪನ ಗೋಲ್ಕಕ್ಕೆ ಹಾಕ್ಬುಡಿ ಸ್ವಾಮಿ.

(ಎಂದು ಹೇಳಿ ಗ್ರಾಮ ಲೆಕ್ಕಿಗನ ಕೈಗೆ ಕೊಡುತ್ತಾನೆ)

ಗ್ರಾಮ ಲೆಕ್ಕಿಗ : ನೀನು ಐನಾತಿ ಕುಳ ಕಣಯ್ಯ. ಕೆಚ್ಚು ಬಡ್ಕೊಂಡ್ರು ಒಂದು ಪೈಸೇನು ಇಲ್ಲ ಅಂತಿದ್ದೆ. ನೋಡು, ಇನ್ನೇನಾದ್ರು ಜೇಬಿನಲ್ಲಿ ಇದ್ದದ್ದೇ ಅಂತ.

ಕತ್ತೆ ಜವರ : ಆ ತಿರುಪತಿ ತಿಮ್ಮಪ್ಪನಾಣೆಗೂ ನನ್ತಾವು ಒಂದ್ಕಾಸು ಇಲ್ಲ ಸ್ವಾಮಿ.

(ಎಂದು ಹೇಳುತ್ತಾ ತನ್ನ ಚಡ್ಡಿ ಜೇಬನ್ನು ಪೂರ್ತಾ ಹೊರ ತೆಗೆದು ಅವನಿಗೆ ತೋರಿಸುತ್ತಿದ್ದಂತೆಯೇ ರಂಗದ ಮೇಲೆ ಕತ್ತಲು ಆವರಿಸುತ್ತದೆ. ರಂಗದ ಮೇಲೆ ಮತ್ತೆ ಬೆಳಕು ಹರಿದಾಗ, ಮೇಷ್ಟ್ರು ತಮ್ಮಣ್ಣ, ಕತ್ತೆ ಜವರ ಮತ್ತು ಕೂಲಿಯವನು ರಂಗದಲ್ಲಿರುತ್ತಾರೆ.)

ಕತ್ತೆ ಜವರ : ಇದು ನಾನು ಸಾಲ ತಕೊಂಡು ಕತೆ ಕಣಪ್ಪ.

ತಮ್ಮಣ್ಣ : ಪೂರ್ತಾ ಸಾಲ ನಿನ್ನ ಕೈಗೆ ಬರೋವತ್ಗೆ ಎಷ್ಟು ಖರ್ಚಾಯಿತು ಜವರಯ್ಯ?

ಕತ್ತೆ ಜವರ : ನನ್ನ ಹೆಸರಲ್ಲಿ ಸಾಲ ಅಂತ ಅವರು ಬರ್ಕೊಂಡು ಕೊಟ್ಟಿದ್ದು ಹತ್ತು ಸಾವಿರ. ಆದ್ರೆ ನನ್ನ ಕೈಗೆ ಬಂದದ್ದು ಒಂಬತ್ತು ಸಾವಿರ. ಆ ವಿಲೇಜು ಅಕೌಂಟೆಂಟರಿಗೆ ಬ್ಯಾಂಕ್ ಕಾರ್ಯದರ್ಶಿಗೆ.... ಅವರ್ಗೆ ಇವರ್ಗೆ ಅಂತ.... ನನ್ನ ತಿರುಗಾಟಕ್ಕೆ ಅಂತ ಎಲ್ಲಾ ಒಂದು ಸಾವಿರ ರೂಪಾಯಿನ ಹತ್ತತ್ರ ಕೈ ಬುಟ್ಬೋಯ್ತು.

ತಮ್ಮಣ್ಣ : ಅವರೆಲ್ಲಾ ಲಂಚ ಕೇಳ್ದಾಗ ಸುಮ್ನೆ ಕೊಟ್ಟು ಬುಟ್ಟಲ್ಲ. ಏನ್ರಿ ಅಕೌಂಟೆಂಟ್ರೆ.... ಏನ್ರಿ ಕಾರ್ಯದರ್ಶಿಗಳೇ.... ನಿಮ್ಮನ್ನೆಲ್ಲಾ ಸರ್ಕಾರ ಸಂಬಳ ಕೊಟ್ಟು ಇಟ್ಕೊಂಡಿರೋದು ನಮ್ಮಂಥ ಜನಗಳ ಕೆಲ್ಸ ಮಾಡಿ ಕೊಡುವುದಕ್ಕೆ ಅಲ್ವೇನ್ರಿ? ನಿಮಗ್ಯಾಕ್ರಿ ನಾನು ಲಂಚ ಕೊಡ್ಬೇಕು ಅಂತ ಒಂದು ಮಾತ ಕೇಳ್ದೇನಯ್ಯ?

ಕತ್ತೆ ಜವರ : ಏನ್ ಮಾಡಿಯಪ್ಪ? ಲಂಚ ಕೊಡ್ದೆ ಹೋದ್ರೆ ಯಾರ ಕೆಲ್ಸ ತಾನೆ ಆದದು? ಸಾಲ ಬೇಗ ಸಿಗಲಿ ಅಂತ ಎಲ್ರೂ ಕೊಟ್ಟಂಗೆ ನಾನು ಕೊಟ್ಟೆ.

ತಮ್ಮಣ್ಣ : (ಆ ಕೂಲಿಯವನ ಕಡೆ ಕೈ ತೋರಿಸುತ್ತಾ)

ಹಾಗಾದ್ರೆ ಊರೋರೆಲ್ಲಾ ಕೊಡ್ತಾವರಲ್ಲ, ಹಂಗೇನೆ ಇವನ್ಗು ಹತ್ತು ರೂಪಾಯಿ ಕೂಲಿ ಕೊಡು. ಇವನನ್ನು ಯಾಕೆ ಪ್ರಶ್ನೆ ಮಾಡ್ತಾ ಇದ್ದೀಯೆ?

ಕತ್ತೆ ಜವರ : ಹಂಗಲ್ಲ ಕಣಪ್ಪ.

ತಮ್ಮಣ್ಣ : ಇನ್ನು ಹೆಂಗಯ್ಯ ನಿನ್ನ ನ್ಯಾಯ? ಬಡವ ಬಿಟ್ಟಿ ಸಿಕ್ಕವ್ನೆ ಅಂತ ಹಿಡ್ಕೊಂಡು ಕೆಚ್ಚು ಬುಟ್ಟ. ಅಲ್ಲೆಲ್ಲಾ ನಿನ್ನ ಮೈಯಿನ ಚರ್ಮ ಸುಲ್ದಂಗೆ ನೂರಾರು ರೂಪಾಯ್ನ ಸುಲೀತಿದ್ದಾಗ, ಹಲ್ಲು ಕಿರ್ಕೊಂಡು, ಕೈಮುಕ್ಕೊಂಡು "ಬಹಳ ಉಪಕಾರ ಮಾಡ್ತಾ ಇದ್ದೀರಿ ಸ್ವಾಮಿ" ಅಂತ ಅಡ್ಡ ಬೀಳ್ತಿದ್ದೆ. ಅದು ಸರಿ ಏನಯ್ಯ?

ಕತ್ತೆ ಜವರ : (ಮಾತನಾಡದೆ ಸುಮ್ಮನಿರುತ್ತಾನೆ)

ತಮ್ಮಣ್ಣ : (ಸ್ವಲ್ಪ ದೂರದಲ್ಲಿ ನಿಂತಿದ್ದ ಆ ಕೂಲಿಯವನ ಕೈ ಹಿಡಿದು ಅವನನ್ನ ಮುಂದಕ್ಕೆ ಕರೆದುಕೊಂಡು ಬಂದು)

ನೋಡು ಜವರಯ್ಯ, ಇವನ್ಯಾರು?.... ನಿನ್ನಂಥ ರೈತನ ಜೊತೇಲಿ ಹಗಲು ರಾತ್ರಿ ಅನ್ನದೆ ದುಡಿಯೋನಲ್ವೆ? ನೀನು ಮುಂದ್ಲು ಏರು ಕಟ್ಟುದ್ರೆ, ಇವನು ಹಿಂದ್ಲು ಏರು ಕಟ್ತನೆ. ನೇಗಿಲಿನ ಗೆರೆ ಒಳಕ್ಕೆ ನಿನ್ನ ಬೆವರಿನ ಜೊತೇಲಿ ಇವನ ಬೆವರು ಬೀಳೊದಿಲ್ವೇನಯ್ಯ? ಅಂಥಾವನು ಹೊಟ್ಟೆಪಾಡಿಗೆ ಒಂದು ರೂಪಾಯ ಹೆಚ್ಚಾಗಿ ಕೇಳುದ್ದುಕ್ಕೆ, ನಿಂಗೆ ಹೊಟ್ಟೆ ಉರ್ದೋಯ್ತು; ಕೋಪ ಬಂದ್ಬುಡ್ತು; ಹೆಗರಾಡ್ಬುಟ್ಟೆ. ಇವನ ಮುಖ ಮುಸುಡಿ ನೋಡ್ದೆ ಹೊಡ್ದು ಹಾಕ್ಬುಟ್ಟೆ. ಅಲ್ಲಿ ನೂರಾರು ರೂಪಾಯಿ ಕಿತ್ಕೊಂಡು ತಿಂದ್ರಲ್ಲ, ನಿಂಗ್ಯಾಕೆ ಆಗ ಕೋಪ ಬರ್ಲಿಲ್ಲ? ನಿಂಗ್ಯಾಕೆ ಹೊಟ್ಟೆ ಉರೀಲಿಲ್ಲ; ನನ್ನಂಥ ರೈತನ ಚರ್ಮನ ಜೀವಂತವಾಗಿ ಏಕೆ ಹಿಂಗೆ ಸುಲ್ದೀರಿ ಅಂತ ಒಂದು ಮಾತು ಕೇಳೊಕೆ ನಿಂಗೆ ನಾಲ್ಗೆ ಇರ್ಲಿಲ್ವೇನಯ್ಯ?

ಕತ್ತೆ ಜವರ : ಅಲ್ಲೆಲ್ಲಾ ನೂರಾರು ರೂಪಾಯ ಕೊಡುವಾಗ ಹೊಟ್ಟೆ ಏನೊ ಉರೀತು ಕಣಪ್ಪ. ಆದ್ರೆ ಅವರ "ಏಕೆ ಹಿಂಗೆ ನನ್ನ ಕಿತ್ಕೊಂಡು ತಿನ್ತಾ ಇದ್ದೀರಿ" ಅಂತ ಕೇಳೊಕೆ ನಾಲ್ಗೆ ಬರ್ದೇ ಹೋಯ್ತು ಕನಪ್ಪ.

ತಮ್ಮಣ್ಣ : ಇಲ್ಲಾದ್ರೆ ಈ ಪೇತುಪರೆ ಸಿಕ್ಕವ್ನೆ ಅಂತ ನಿನ್ನ ಪ್ರತಾಪ ತೋರ್ಸಿಬುಟ್ಟ.

ಕತ್ತೆ ಜವರ : (ಮಾತನಾಡದೆ ತಲೆ ತಗ್ಗಿಸುತ್ತಾನೆ)

ತಮ್ಮಣ್ಣ : ನಿಂಗೇನಯ್ಯ, ಈಗ ದುಡ್ಡಿಗೆ ತೊಂದರೆ? ಬಾವಿ ತೆಗ್ಸಿ, ಪಂಪ್‌ಸೆಟ್ ಇಟ್ಟ ಮೇಲೆ ಸಾಕಷ್ಟು ಅನುಕೂಲವಾಗಿರಬೇಕಲ್ಲ.

ಕತ್ತೆ ಜವರ : ಓ ನನ್ನ ಅನುಕೂಲ್ವ ನೀನೆ ಕಂಡಿದ್ದೀಯಲ್ಲಪ್ಪ. ಸಾಯ್ಲಿಲ್ಲಾ.... ಬದುಕ್ಲಿಲ್ಲಾ; ಹೊಟ್ಟೆಗೆ ಇದ್ರೆ ಬಟ್ಟೆಗಿಲ್ಲ; ಬಟ್ಟೆಗೆ ಇದ್ರೆ ಹೊಟ್ಟೆಗಿಲ್ಲ. ನಮ್ಮಂಥ ರೈತರದು ಒಂದು ಬಾಳೆ ಬನ್ನಿ ತಮ್ಮಣ್ಣ.

ತಮ್ಮಣ್ಣ : ಇದ್ಯಾಕಯ್ಯ ಹಿಂಗಂತಿಯಾ? ಪಂಪಿನ ಬಾವಿ ಇದ್ಮೇಲೆ ಒಳ್ಳೆ ಬೆಳೆ ಬೆಳ್ದು ಸಂಪಾದನೆ ಮಾಡ್ತಾ ಇಲ್ವೆ?

ಕತ್ತೆ ಜವರ : ಆರಂಬದಲ್ಲಿ ಸಂಪಾದನೆ ಮಾಡೋದು ಅಷ್ಟು ಸುಲಭ ಅಂತ ತಿಳುಕೊಂಡುಬುಟ್ರಾ ಮೇಷ್ಟ್ರೆ. ಅದರ ಕಷ್ಟಾನ ಅನುಭವಿಸ್ತಾ ಇರೋರಿಗೆ ಗೊತ್ತು.

ತಮ್ಮಣ್ಣ : ತಗೊಂಡಿದ್ದ ಸರ್ಕಾರಿ ಸಾಲನೆಲ್ಲ ತೀರಿಸ್ಬುಟ್ಟೇನಯ್ಯ?

ಕತ್ತೆ ಜವರ : ಅಯ್ಯೋ, ಅದರ ಕಥೆ ದೊಡ್ಡದು. ಅದನ್ಯಾಕೆ ಕೆದಕಿ ಕೆದಕಿ ನನ್ನ ಹೊಟ್ಟೆ ಉರ್ಸಿರಿ.

ತಮ್ಮಣ್ಣ : ಮೂಗೆತ್ತಿನಂಗೆ ದುಡಿತಾ ನಿನ್ನ ನೋವ ನೀನೇ ತಿಂತಾ ಇದ್ರೆ, ಬೇರೆಯವರಿಗೆ ಗೊತ್ತಾಗುವುದು ಹೆಂಗೆ? ನಿನ್ನಂಥ ರೈತರ ಹೊಟ್ಟೆ ಉರಿ ನಾಲ್ಕು ಜನಕ್ಕೆ ಗೊತ್ತಾಗಬೇಕು. ಹೇಳು ಜವರಯ್ಯ ಅದೇನು ನಿನ್ನ ಕಷ್ಟ ಅಂತಾ.

ಕತ್ತೆ ಜವರ : ಮೊದ್ಲೇ ನಮ್ಮ ಹಿರೀಕರು ಹೇಳಿಲ್ವೇನಪ್ಪಾ "ಸಾಲವೋ-ಶೂಲವೊ" ಅಂತ. ಆ ಶೂಲ ಈಗ ಹಾಕೊಂಡು. ನನ್ನ ಇರಿತಾದೆ ಕಣಪ್ಪ.

(ರಂಗದ ಮೇಲೆ ಕತ್ತಲು ಆವರಿಸುತ್ತದೆ. ಮತ್ತೆ ಬೆಳಕು ವ್ಯಾಪಿಸಿದಾಗ ಹರಾಜಿನ ದೃಶ್ಯವೊಂದು ರಂಗದ ಮೇಲೆ ಮೂಡಿಬರುತ್ತದೆ. ತಮಟೆಯೊಂದನ್ನು ಬಾರಿಸುತ್ತಾ ಊರ ತೋಟಿಯು ಹರಾಜಿನ ಸಂಗತಿಯನ್ನು ಸಾರುತ್ತಾ ಬರುತ್ತಾನೆ)

ತೋಟಿ : ಕೇಳ್ರಪ್ಪೋ.... ಕೇಳಿ. ಕತ್ತೆ ಜವರಪ್ಪನ ಮನೆ ಸಾಮಾನು ಹರಾಜು ಕಣ್ರಪ್ಪೋ.... ಸರ್ಕಾರಿ ಬಿಡ್ ಮೇಲೆ ಹೆಚ್ಚಾಗಿ ಕೂಗಿ ಯಾರು ಬೇಕಾದ್ರು ತಕಬೋದು ಕಣ್ರಪ್ಪೋ.... ಕೇಳ್ರಪ್ಪೋ.... ಕೇಳಿ.

(ತಮಟೆ ಬಾರಿಸುತ್ತಾ ಸಾಗುತ್ತಿರುತ್ತಾನೆ. ಅದೇ ರಸ್ತೆಯಲ್ಲಿ ಎದುರು ದಿಕ್ಕಿನಿಂದ ಬಂದ ಊರ ಗೌಡನು ತೋಟಿಯನ್ನು ಕರೆದು)

ಗೌಡ : ಏನ್ಲಾ ಅದು ಸಾರ್‍ತಾ ಇದ್ದೀಯಲ್ಲ ?

ತೋಟಿ : ಕತ್ತೆ ಜವರಪ್ಪ ಸಾಲ ಕಟ್ಟಿರಲಿಲ್ಲ. ಹದಿನೈದು ದಿನದೊಳಗೆ ದುಡ್ಡೆಲ್ಲಾ ಕಟ್ಬುಡು, ಇಲ್ದೇದ್ರೆ ಮನೆ ಜಪ್ತಿ ಮಾಡ್ತೀವಿ ಅಂತ ಲೋಟೀಸ್ ಕೊಟ್ಟಿದ್ದರು. ಜವರಪ್ಪ ಸಾಲ ಕಟ್ಟಲಿಲ್ಲ. ಅದಕ್ಕೆ ಕತ್ತೆ ಜವರಪ್ಪನ ಮನೆ ಸಾಮಾನ್ನೆಲ್ಲಾ ಗೋರ್‍ಕೊಂಡು ಬಂದು ಮಾರಿ ಗುಡಿ ಹತ್ರ ಗುಡ್ಡೆ ಹಾಕ್ಕೊಂಡವ್ರೆ. ಈಗ ಇನ್ನೇನು ಹರಾಜು ಮಾಡ್ತರೆ. ಯಾರು ಬೇಕಾದ್ರು ತಕೋಬೋದು. ಕೇಳ್ರಪ್ಪೋ.... ಕೇಳಿ.... ಕತ್ತೆ ಜವರಪ್ಪನ ಮನೆ ಹರಾಜು ಕಣ್ರಪ್ಪೋ....

(ಎಂದು ಸಾರುತ್ತಾ ಮುನ್ನಡೆಯುತ್ತಾನೆ. ಅವನನ್ನೇ ಹಿಂಬಾಲಿಸಿದ ಗೌಡನು ಹರಾಜು ನಡೆಯುವ ಸ್ಥಳಕ್ಕೆ ಬರುತ್ತಾನೆ. ಅಲ್ಲೇ ನಿಂತಿದ್ದ ಸೇಲ್ ಆಫೀಸರ್ ಅವರನ್ನು ಕುರಿತು ಮಾತನಾಡತೊಡಗುತ್ತಾನೆ.)

ಗೌಡ : ನಮಸ್ಕಾರ ಸ್ವಾಮಿ.

ಸೇಲ್ ಆಫೀಸರ್: ನಮಸ್ಕಾರ.

ಗೌಡ : ನಮ್ಮ ಕತ್ತೆ ಜವರನ ಸಾಲ ಇನ್ನೆಷ್ಟು ಉಳ್ಕೊಂಡಿದ್ದದು ಸ್ವಾಮಿ?

ಸೇಲ್ ಆಫೀಸರ್: ಬಾವಿ ಸಾಲ ಆರು ಸಾವಿರ. ಪಂಪ್‌ಸೆಟ್‌ಗೆ ನಾಲ್ಕು ಸಾವಿರ. ಒಟ್ಟು ಹತ್ತು ಸಾವಿರ ಸಾಲ ತಗೊಂಡಿದ್ದು. ಇದುವರೆಗೆ ವಿವಿಧ ಕಂತುಗಳಲ್ಲಿ ಕಟ್ಟಿರುವುದು ಎಂಟು ಸಾವಿರದ ಐನೂರು. ಇನ್ನೂ ಉಳಿದಿರುವುದು ಎಂಟು ಸಾವಿರದ ಒಂಬೈನೂರು ಐವತ್ತು ರೂಪಾಯಿ.

ಗೌಡ : (ಜೋರಾಗಿ ನಗುತ್ತಾ)
ಇದೇನ್ ಸ್ವಾಮಿ? ನಿಮ್ಗೆ ಕೂಡೂಕೆ.... ಕಳೆಯೋಕೆ ಬರಲ್ತು.

ಸೇಲ್ ಆಫೀಸರ್: ಸ್ವಲ್ಪ ಗಂಭೀರವಾಗಿ ಮಾತಾಡ್ರಿ. ಬಾಯ್ಗೆ ಬಂದಂಗೆಲ್ಲಾ ಯಾಕ್ರಿ ಮಾತಾಡ್ತೀರಾ?

ಗೌಡ : ನಾನೇನು ತಪ್ಪು ಮಾತಾಡ್ದೆ ಸ್ವಾಮಿ? ನಿಮ್ಮ ಲೆಕ್ಕಾಚಾರ ಕೇಳ್ಬುಟ್ಟು ನಂಗೆ ಭೋ ನಗ ಬಂದ್ಬುಡ್ತು.

ಸೇಲ್ ಆಫೀಸರ್: ಯಾಕ್ರಿ ನಗು ಬಂತು?

ಗೌಡ : ನಿಮ್ಮ ಬ್ಯಾಂಕಿನಲ್ಲಿ ನಮ್ಮ ಕತ್ತೆ ಜವರ ಸಾಲ ತಕೊಂಡಿದ್ದು ಒಟ್ಟು ಹತ್ತು ಸಾವಿರ ಅಲ್ವೆ ಸ್ವಾಮಿ.

ಸೇಲ್ ಆಫೀಸರ್: ಹೌದು.

ಗೌಡ : ಹಿಂದಕ್ಕೆ ಕಟ್ಟಿರೂದು ಎಂಟೂವರೆ ಸಾವಿರ ಅಲ್ವರಾ?

ಸೇಲ್ ಆಫೀಸರ್: ಹೌದು.

ಗೌಡ : ಅಲ್ಲಿಗೆ ಇನ್ನು ಬಾಕಿ ಇರ್ಬೇಕಾದ್ದು ಒಂದೂವರೆ ಸಾವಿರ ಅಲ್ವೆ?

ಸೇಲ್ ಆಫೀಸರ್: (ನಗುತ್ತಾ)

ಏನು ಗೌಡ್ರೆ, ಸರ್ಕಾರ ಪುಕ್ಸಟ್ಟೆ ಸಾಲ ಕೊಡುತ್ತೆ ಅಂತ ತಿಳ್ಕೊಂಡಿದ್ದೀರಾ? ಸ್ವಲ್ಪನೂ ತಿಳುವಳ್ಕೆ ಇಲ್ದೇ ಇರೋರಂಗೆ ಮಾತಾಡ್ತ ಇದ್ದೀರ? ನಮ್ಮ ಬ್ಯಾಂಕಿನಲ್ಲಿ ಈತ ಸಾಲ ತಕ್ಕೊಂಡು ಹತ್ತು ವರ್ಷ ಆಯ್ತು. ಮೊದಲು ಐದು ವರ್ಷ ಬ್ಯಾಂಕಿನ ಕಡೆ ತಲೇನೆ ಹಾಕ್ಲಿಲ್ಲ. ಬಡ್ಡಿಗೆ.... ಬಡ್ಡಿ ಸೇರಿ ಸಾಲ ಬೆಟ್ಟದಂಗೆ ಬೆಳದ್ಹೋಯ್ತು. ನಮ್ಮ ಒತ್ತಾಯ ತಡೀಲಾರದೆ, ಆಗಾಗ ಸ್ವಲ್ಪ ಸ್ವಲ್ಪ ಕಂತು ಕಟ್ಕೊಂಡು ಬಂದ. ಇವನು ಕಟ್ಟಿದ ಕಂತೆಲ್ಲಾ ಬಡ್ಡಿಗೆ ಹೆಚ್ಚಾಗಿ ಜಮಾ ಆಯ್ತು. ಇನ್ನು ಈತ ಕಟ್ಟಬೇಕಾಗಿರೋದು ಎಂಟು ಸಾವಿರದ ಒಂಬೈನೂರ ಐವತ್ತು ರೂಪಾಯಿ.

ಗೌಡ : ಇವನ ಸಾಲದ ಲೆಕ್ಕಾಚಾರ ಈಗ ಅರ್ಥವಾಯಿತು ಸ್ವಾಮಿ. ಈಗೇನಾದ್ರೂ ಮಾಡಿ, ಈ ಹರಾಜು ನಿಲ್ಲಿಸಿ ಸ್ವಾಮಿ. ಒಂದೆರಡು ತಿಂಗಳು ಟೈಮ್‌ಕೊಡಿ. ಒಸಿ ಕಬ್ಬು ಹಾಕೊಂಡವ್ನೆ. ಅದ ಸಕ್ಕರೆ ಫ್ಯಾಕ್ಟರಿಗೆ ಹೊಡ್ದುಬುಟ್ಟು ಒಂದೆರಡು ಕಂತು ಕಟ್ತನೆ.

ಸೇಲ್ ಆಫೀಸರ್: ಈಗ ನಾನೇನು ಮಾಡೂಕಾಗೊಲ್ಲ ಗೌಡ್ರೆ. ಕೊನೆ ಪಕ್ಷ ಐದು ಸಾವಿರನಾದ್ರು ಈಗ ಕಟ್ಬುದ್ರೆ, ನೀವು ಹೇಳಿದ ಹಾಗೆ ಹರಾಜು ರದ್ದು ಮಾಡಬಹುದು.

ಗೌಡ : ನೋಡೊ, ಕತ್ತೆ ಜವರ, ಏನಾದ್ರು ಮಾಡಿ ಒಸಿ ಕಟ್ಬುಡೊ.

ಕತ್ತೆ ಜವರ : ವಿಷ ಕುಡಿತೀನಿ ಅಂದ್ರು, ನನ್ತಾವು ಮೂರ್ಕಾಸು ಇಲ್ಲ ಕಣಪ್ಪ.

ಗೌಡ : ಏನಾರ ಮಾಡಿ ಸ್ವಾಮಿ, ಭೋ ಕಷ್ಟಕ್ಕೆ ಸಿಗಾಕೊಂಡು ಬುಟ್ಟವ್ನೆ.

ಸೇಲ್ ಆಫೀಸರ್: ಏನು ಮಾಡೋಕಾಗೋದಿಲ್ಲ ಗೌಡ್ರೆ. ದುಡ್ಡು ಕಟ್ಟಲೇ ಬೇಕು. ಇಲ್ದೇದ್ರೆ ಈಗ ಹರಾಜು ನಡೆಯುತ್ತೆ.

ಗೌಡ : ಹರಾಜಿನ ಗುಡ್ಡೇಲಿ ಏನೇನು ಅವೆ ಸ್ವಾಮಿ?

ಸೇಲ್ ಆಫೀಸರ್: (ಒಂದು ಪಟ್ಟಿಯಲ್ಲಿ ಬರೆದುಕೊಂಡಿದ್ದ ವಸ್ತುಗಳ ವಿವರವನ್ನು ಓದತೊಡಗುತ್ತಾನೆ) ತಾಮ್ರದ ಎರಡು ಅಂಡೆ, ಐದು ಸ್ಟೀಲ್ ತಟ್ಟೆ, ಹತ್ತು ಕಂಚಿನ ಲೋಟ, ಒಂದು ಜೊತೆ ಎತ್ತು; ಎರಡು ಎಮ್ಮೆ, ಐದು ಕುರಿ, ಒಂದು ಕಬ್ಬಿಣದ ನೇಗಿಲು, ಒಂದು ಮರದ ನೇಗಿಲು, ಎರಡು ನೊಗ, ನಾಲ್ಕು ಜೊತಿಗೆ ಗುಂಟ.

ಗೌಡ : ಇನ್ನೇನು ಅವನ ಮನೇಲಿ ಮಡ್ಕೆ ಕುಡ್ಕೆ ಬುಟ್ರೆ, ಎಲ್ಲಾನು ಎತ್ಕೊಂಡು ಬಂದ್ಬುಟ್ಟಿದ್ದೀರಿ.

ಸೇಲ್ ಆಫೀಸರ್: (ತೋಟಿಯ ಕಡೆ ತಿರುಗಿ)
ತಮಟೆ ಬಾರಸಯ್ಯ ನೀನು.... ಇನ್ನು ಜನ ಹೆಚ್ಚಾಗಿ ಸೇರಲಿ.

ತೋಟಿ : (ತಮಟೆಯನ್ನು ಜೋರಾಗಿ ಬಾರಿಸುತ್ತಾ)

ಹರಾಜು ಕಣ್ರಪ್ಪೋ.... ಹರಾಜು. ಕತ್ತೆ ಜವರಪ್ಪನ ಮನೆ ಸಾಮಾನು ಹರಾಜು ಕಣ್ರಪ್ಪೋ....

(ಎಂದು ಸಾರುತ್ತಿದ್ದಂತೆಯೇ ರಂಗದ ಮೇಲೆ ಕತ್ತಲು ಆವರಿಸುತ್ತದೆ. ಮತ್ತೆ ರಂಗದ ಮೇಲೆ ಬೆಳಕು ಹರಡಿದಾಗ ಕತ್ತೆ ಜವರ, ಕೂಲಿ, ಮೇಷ್ಟ್ರು ತಮ್ಮಣ್ಣನವರ ದೃಶ್ಯ)

ತಮ್ಮಣ್ಣ : ಅಲ್ಲಲ್ಲೇ ಕಂತುಬಡ್ಡಿ ಸರಿಯಾಗಿ ಕಟ್ಕೊಂಡು ಹೋಗೋಕೆ ನಿಂಗೇನಾಗಿತ್ತಯ್ಯ?

ಕತ್ತೆ ಜವರ : ಇದೇನು ಮೇಷ್ಟ್ರೆ? ನೀವು ಬ್ಯಾಂಕಿನೋರು ಅಂದಂಗೆ ಅಂತೀರಲ್ಲ. ನಂಗೇನು ಸಾವಿರಾರು ರೂಪಾಯಿ ಬಡ್ಡಿ ಕಟ್ಟೋಕೆ ಸುಮಾನವೆ? ಊರಲ್ಲೆಲ್ಲಾ ತಲೆ

ಎತ್ಕೊಂಡು ತಿರುಗಾಡ್ದಂಗೆ, ಮಾನ ಕಳಕೊಂಡು ಹರಾಜು ಮಾಡ್ಸಿಕೋಕೆ ಆಸೆಯಾಗಿತ್ತೆ?

ತಮ್ಮಣ್ಣ : ಯಾಕಯ್ಯ, ಆರಂಬದಲ್ಲಿ ಚೆನ್ನಾಗಿ ಸಂಪಾದ್ನೆ ಬರೋದಿಲ್ವೆ?

ಕತ್ತೆ ಜವರ : ಆರಂಬದಲ್ಲೆ.... ಸಂಪಾದ್ನೆ ಆಯ್ತದೆ ಹೆಂಗೆ ಅಂದಿರೊ "ಎಮ್ಮೆ ಬೆಣ್ಣೆ, ಎಮ್ಮೆ ಕಣ್ಣಿಗಾದಂಗೆ."

ತಮ್ಮಣ್ಣ : ಕಬ್ಬು, ಬತ್ತ, ಕಡ್ಲೆಕಾಯಿ, ತರಕಾರಿ ಅಂತ ತರಾವರಿ ಬೆಳೆ ಬೆಳೆದ್ರೆ ಸಾವಿರಾರು ರೂಪಾಯಿ ಆದಾಯ ಬರೋದಿಲ್ವೇನಯ್ಯ?

ಕತ್ತೆ ಜವರ : ಆದಾಯ ಬರೋದಿಲ್ಲ ಸ್ವಾಮಿ, ಬೆಳೆಗಳ ಬೆಳೀತಾ ಹೋದಂಗೆಲ್ಲಾ ಸಾವಿರಾರು ರೂಪಾಯಿ ಸಾಲ ರೈತರ ಎದೆ ಮೇಲೆ ಒರಿಕೋತದೆ.

ತಮ್ಮಣ್ಣ : ಯಾಕಯ್ಯ ಹಿಂಗಂತೀಯಾ ?

ಕತ್ತೆ ಜವರ : ಕಂಡು ಕಂಡು ಹೆಣ್ಣೋ.... ಗಂಡೋ.... ಅಂತ ಕೇಳ್ದಂಗೆ ಆಯ್ತು ನಿಮ್ಮ ಪ್ರಶ್ನೆ. ನೋಡಿ ಮೇಷ್ಟ್ರೆ, ಸಾವಿರಾರು ರೂಪಾಯಿ ಸಾಲ ಮಾಡಿ ಗೊಬ್ಬರ ತಂದು ಎಳೆದು, ಈ ಕೂಲಿಯವರ ಜೊತೇಲಿ ಬಡ್ದಾಡ್ಕೊಂಡು, ಹಗಲು ರಾತ್ರಿ ಅನ್ನದೆ ಮನೆ ಜನವೆಲ್ಲಾ ಕಷ್ಟಪಟ್ಟು ದುಡ್ದು, ಅಷ್ಟೋ ಇಷ್ಟೋ, ಬೆಳೆ ಬೆಳೀತಿವಿ. ಆದರೆ ನಾವು ರೈತರು ಬೆಳೆದ ಬೆಳೆಯ ಒಂದು ಒಳ್ಳೆ ಬೆಲೆಗೆ ತಕೊಳೊರೆ ದಿಕ್ಕಿಲ್ಲವಲ್ಲ ಸ್ವಾಮಿ.

ತಮ್ಮಣ್ಣ : ಯಾಕಯ್ಯ ಬತ್ತಕ್ಕೆ ರೇಟಿಲ್ಲವೇನು?

ಕತ್ತೆ ಜವರ : ಬತ್ತಕ್ಕೆ ರೇಟೆ? ಸುಗ್ಗಿ ಕಾಲದಲ್ಲಿ ಬತ್ತವ ಕೇಳೋರೆ ಇಲ್ಲ ಸ್ವಾಮಿ. ನಮ್ಮ ದರ್ದು ತಡೀನಾರ್ದೆ, ಆ ದಳ್ಳಾಳಿಗಳ ಹತ್ತಿರ ಹೋಗಿ "ನೀವು ತಕೋಳ್ರಪ್ಪ.... ನೀವು ತಕೊಳ್ರಪ್ಪ" ಅಂತ ಅವರ ತಿಕ ಒಸಕಬೇಕು. ಇನ್ನು ಆ ಕಬ್ಬು ಹಾಕಿದ್ರಂತೂ ಒಂದೂವರೆ ವರ್ಷ ದುಡ್ಡಿನ ಮುಖ ನೋಡುವಂಗಿಲ್ಲ.ಆಮೇಲೆ ಬರೊ ದುಡ್ಡು ಅಲ್ಲಿಗಂಟ ಮಾಡೀರು ಗೊಬ್ಬರದ ಸಾಲಕ್ಕು, ಕೈಸಾಲಕ್ಕೂ ವಜಾ ಆಯ್ತದೆ. ತರಕಾರಿ ಬೆಳೆದು ಬುಟ್ರೆ ಆ ಹೊಟ್ಟೆ ಉರಿ ಯಾಕೆ ಹೇಳಿರಿ. ಬೆಳ್ದೋರ್ಗೆ ಗೊತ್ತು ಆ ಸಂಕಟ.

ತಮ್ಮಣ್ಣ : ಜವರಯ್ಯ ನೀನು ಬೆಳೆದ ಬೆಳೆಗಳಿಗೆ ಮಾತ್ರವಲ್ಲ; ನಿನ್ನಂಥ ರೈತರ ಜೀವಕ್ಕೂ ಮೂರ್ಕಾಸಿನ ಬೆಲೆ ಇಲ್ಲ ಕಣಯ್ಯ.

ಕತ್ತೆ ಜವರ : ಇದ್ಯಾಕೆ ಸ್ವಾಮಿ, ಭೋ ಕನಿಷ್ಠವಾಗಿ ಮಾತಾಡ್ತ ಇದ್ದೀರಿ?

ತಮ್ಮಣ್ಣ : ನಿನ್ನಂಗೆ ಕಷ್ಟಪಟ್ಟು ಎಷ್ಟೇ ಬೆಳೆ ಬೆಳುದ್ರು ಸಾಲ ಸೋಲದಲ್ಲೇ ನರಳಿ ನರಳಿ ಬೆಂದ್ಹೋದ ಕೆಲವು ರೈತರೆಲ್ಲ ಜೊತೆಯಾಗಿ "ರೈತರು ಬೆಳೆದ ಬೆಳೆಗಳಿಗೆ ಒಳ್ಳೆ ಬೆಲೆ ಕೊಡಿ. ನಮ್ಮ ರೈತರ ಸ್ಥಿತಿ ಸ್ವಲ್ಪನಾದ್ರು ಉತ್ತಮವಾಗುವಂಗೆ ಮಾಡಿ" ಅಂತ ಸರ್ಕಾರನ ಕೇಳೋದಕ್ಕೆ ಹೋದಾಗ ನರಗುಂದ, ನಿಪ್ಪಾಣಿ, ಗೆಜ್ಜಲಗೆರೆ, ಅಲ್ಲೆಲ್ಲಾ ಏನಾಯ್ತು ಗೊತ್ತೇನಯ್ಯ?

ಕತ್ತೆ ಜವರ : ಏನಾಯ್ತು ಮೇಷ್ಟ್ರೆ?

ತಮ್ಮಣ್ಣ : ನೋಡಲ್ಲಿ....
(ಎನ್ನುತ್ತಿದ್ದಂತೆಯೇ ರಂಗದ ಮೇಲೆ ಕತ್ತಲು ಆವರಿಸುತ್ತದೆ. ಮತ್ತೆ ರಂಗದ ಮೇಲೆ ಬೆಳಕು ವ್ಯಾಪಿಸಿದಾಗ ರೈತ ಚಳುವಳಿಯ ದೃಶ್ಯ. ರೈತರು ಘೋಷಣೆಗಳನ್ನು ಕೂಗುತ್ತ ರಸ್ತೆಯಲ್ಲಿ ಬರುತ್ತಿದ್ದಾರೆ)

ರೈತ ಮುಖಂಡ: ರಾಜ್ಯ ರೈತ ಸಂಘಕ್ಕೆ....

ಎಲ್ಲರೂ : ಜಯವಾಗಲಿ.

ಮುಖಂಡ : ರಾಜ್ಯ ರೈತ ಸಂಘಕ್ಕೆ.

ಎಲ್ಲರೂ : ಜಯವಾಗಲಿ.

ಮುಖಂಡ : ಯಾತಕ್ಕಾಗಿ ಹೋರಾಟ?

ಎಲ್ಲರೂ : ನ್ಯಾಯಕ್ಕಾಗಿ ಹೋರಾಟ.

ಮುಖಂಡ : ಎಲ್ಲಿಯವರೆಗೆ ಹೋರಾಟ?

ಎಲ್ಲರೂ : ಗೆಲ್ಲುವವರೆಗೆ ಹೋರಾಟ.

ಮುಖಂಡ : ದುಡಿಯುವವರು ನಾವು....

ಎಲ್ಲರೂ : ಮಜ ಮಾಡುವವರು ಯಾರೊ?

ಮುಖಂಡ : ರೈತರ ಶೋಷಣೆ....

ಎಲ್ಲರೂ : ನಿಲ್ಲಲಿ.

ಮುಖಂಡ : ಹಸಿರು....

ಎಲ್ಲರೂ : ನಮ್ಮ ಉಸಿರು....
(ಅಷ್ಟರಲ್ಲಿ ಒಬ್ಬ ಪೋಲಿಸ್ ಇನ್‌ಸ್ಪೆಕ್ಟರ್, ಹಲವು ಮಂದಿ ಕಾನ್‌ಸ್ಟೇಬಲ್‌ಗಳೊಡನೆ ಬಂದು ರೈತರ ಜಾತಾವನ್ನು ತಡೆಯುತ್ತಾರೆ)

ಇನ್‌ಸ್ಪೆಕ್ಟರ್ : ನಿಲ್ರಿ.... ನಿಲ್ರಿ....
(ಲಾಠಿಗಳನ್ನು ಅತ್ತಿತ್ತ ಬೀಸುತ್ತಾ, ರೈತರನ್ನು ಅಡ್ಡಗಟ್ಟುತ್ತಾರೆ)

ಮುಖಂಡ : ನಮಸ್ಕಾರ ಸ್ವಾಮಿ.

ಇನ್‌ಸ್ಪೆಕ್ಟರ್ : ಏನ್ರಿ.... ಏನ್ರಿ.... ಇದೆಲ್ಲಾ ಗಲಾಟೆ?

ಮುಖಂಡ : ಗಲಾಟೆಯೇನಿಲ್ಲ ಸ್ವಾಮಿ, ಶಾಂತಿಯಿಂದ ಹೊಯ್ತ ಇದ್ದೀವಿ. ತಹಶೀಲ್ದಾರರನ್ನು ಕಂಡು, ನಮ್ಮ ರೈತರ ಕಷ್ಟ ನಷ್ಟನೆಲ್ಲಾ ಅವರ್ಗೆ ಹೇಳ್ಕೊಂಡು, ಸರ್ಕಾರದ ಗಮನಕ್ಕೆ ತರ್ಬೇಕು ಅಂತ ನಾವೆಲ್ಲ ಬಂದಿದ್ದೀವಿ.

ಇನ್‌ಸ್ಪೆಕ್ಟರ್ : ಈ ಊರ್‍ನಲ್ಲಿ ಒಂದು ವಾರದಿಂದ 144ನೇ ಸೆಕ್ಷನ್ ಜಾರೀಲಿದೆ ಅನ್ನೋದು ನಿಮಗೆ ಗೊತ್ತಿಲ್ವೇನ್ರಿ?

ಮುಖಂಡ : ನಾವು ರೈತರು, ನಮಗೆ ಸೆಕ್ಷನ್ ಗಿಕ್ಷನ್ ಅಂತ ಅದ್ಯಾವುದು ಗೊತ್ತಿಲ್ಲ ಸ್ವಾಮಿ. ನಮ್ಮ ರೈತಾಪಿ ಜನಗಳ ತೊಂದರೆಗಳನ್ನು ತಹಶೀಲ್ದಾರ್ಗೆ ಹೇಳ್ಕೋಬೇಕು ಅಂತ ಬಂದಿದ್ದೀವಿ. ಅದಕ್ಕೆ ಯಾವ ಸೆಕ್ಷನ್.... ಬುಡಿ ಸ್ವಾಮಿ ದಾರೀನ.

ಇನ್‌ಸ್ಪೆಕ್ಟರ್ : ಈಗ ನೀವು ತಹಶೀಲ್ದಾರರನ್ನು ನೋಡೋಕೆ ಆಗೋದಿಲ್ಲ.

ಮುಖಂಡ : ಯಾಕೆ ಸ್ವಾಮಿ?

ಇನ್‌ಸ್ಪೆಕ್ಟರ್ : ಯಾಕೆ ಅಂತ ನಿಮಗೆ ಹೇಳ್ಬೇಕಾದ ಅಗತ್ಯವಿಲ್ಲ. ತಹಶೀಲ್ದಾರರನ್ನಲ್ಲ.... ತಾಲ್ಲೂಕು ಕಛೇರಿ ಮೆಟ್ಟಲು ಹತ್ತೋದಕ್ಕೂ ನಿಮ್ಮನ್ನು ಬಿಡೋಲ್ಲ. ಇನ್ನೊಂದು ಹೆಜ್ಜೆ ಮುಂದಕ್ಕಿಡಬೇಡಿ. ಈ ತಕ್ಷಣ ಎಲ್ಲಾ ಜಾಗ ಖಾಲಿ ಮಾಡಿ. ಎಲ್ಲಾ ಹಿಂದಕ್ಕೆ ಹೋಗಿ.

ಮುಖಂಡ : ನಮ್ಮ ಪ್ರಾಣ ಹೋದ್ರೂ ಇಲ್ಲಿಂದ ಒಂದು ಹೆಜ್ಜೆ ಹಿಂದಕ್ಕೆ ಹೋಗೊಲ್ಲ. ನಮ್ಮ ಹಳ್ಳಿಗಳಲ್ಲಿ ಜೀವಂತವಾಗಿ ಬೆಂದು ಬೆಂದು ಹಾಳಾಗು ಬದ್ಲು, ಇಲ್ಲೇ ಬೇಕಾದ್ರೆ ಸಾಯ್ತೀವಿ.

ಇನ್‌ಸ್ಪೆಕ್ಟರ್ : ಏನ್ರಿ.... ಗೂಂಡಾಗಿರಿ ಮಾಡ್ಬೇಕು ಅಂತ ಬಂದಿದ್ದೀರೇನ್ರಿ? ಈ ಊರಲ್ಲೆಲ್ಲಾ ಲೂಟಿ ದರೋಡೆ ಮಾಡ್ಬೇಕು ಅಂತ ಇಷ್ಟೊಂದು ಜನರನ್ನೆಲ್ಲಾ ಕರ್ಕೊಂಡು ಬಂದಿದ್ದೀರಾ?

ಮುಖಂಡ : ನಾವು ಲೂಟಿ ಮಾಡೋಕೆ ಬಂದಿರೊರಲ್ಲ. ನಮ್ಮಂಥ ರೈತರನ್ನು ಲೂಟಿ ಮಾಡ್ಬೇಡಿ ಅಂತ ನಿಮ್ಮಂಥವರ್ಗೆ ಹೇಳೋಕೆ ಬಂದಿರೋರು. ರ‍್ರೀ.... ಇನ್‌ಸ್ಪೆಕ್ಟರೇ.... ನಾವು ರೈತಾಪಿ ಜನ. ತಿಪ್ಪೆಗುಂಡೀಲಿ ಗೊಬ್ಬರ ಹೊರ್ತಾ, ಹಗಲು ರಾತ್ರಿ ಅನ್ದೆ ಹೊಲಗದ್ದೆ, ತೋಟ ತುಡ್ಕೆಗಳಲ್ಲಿ ದುಡೀತಾ, ಸಾಲ ಸೋಲದಲ್ಲಿ ಎಕ್ಕ ಹುಟ್ಟೋಯ್ತು ಇರೋ ಜನ.

ಮತ್ತೊಬ್ಬ ರೈತ: ನೀವು ನಿಮ್ಮಂಥವ್ರು ಪೇಟೆಗಳಲ್ಲಿ ಆರಾಮವಾಗಿ ಕುಂತುಕೊಂಡು ದಿನಾ ಪೋಣಿಸ್ತಾ ಇದ್ದೀರಲ್ಲ ಸಣ್ಣಕ್ಕಿ ಅನ್ನ, ಅದು ನನ್ನಂಥ ರೈತರು ಹಳ್ಳಿಗಳಲ್ಲಿ ಬೆವರು ಸುರಿಸಿ, ರಕ್ತ ಬಸಿದು ಬೆಳೆದದ್ದು ಕಣೋ ಅಣ್ಣ.

ಮುಖಂಡ : ರೈತರು ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆ ನಿಗದಿ ಮಾಡ್ದೆ, ಹಗಲು ದರೋಡೆ ಮಾಡ್ತ ಇರೊ ಆ ಸರ್ಕಾರ; ಕಾಳಸಂತೆಕೋರರು ಎಸೆಯುವ ಎಂಜಲು ಕಾಸು ಎತ್ಕೊಂಡು ಅವರಿಗೆ ಕುಮ್ಮಕ್ಕು ಕೊಡ್ತಾ ಇರೊ ನಿಮ್ಮಂಥ ಅಧಿಕಾರಿಗಳು ಸ್ವಾಮಿ ದರೋಡೆಕೋರರು.

ಮತ್ತೊಬ್ಬ ರೈತ:ನೀತಿಯಿಲ್ದೆ ಇರೂ ರಾಜಕಾರಣಿ.... ಲಂಚ ತಿನ್ನು ಸರ್ಕಾರಿ ನೌಕರ... ಕಾಳಸಂತೆಕೋರನಾದ ವ್ಯಾಪಾರಸ್ಥ ಇವರು ಮೂರು ಜನ ಅಲ್ವೇನಯ್ಯ ಇವತ್ತು ನಮ್ಮ ದೇಶಾನೆ ಲೂಟಿ ಹೊಡೀತಾ ಇರೊರು. ಅಂಥಾವ್ರ ಮೇಲೆ ಬೀಸಯ್ಯ ನಿನ್ನ ಲಾಠಿ; ಹಾರಸಯ್ಯ ನಿನ್ನ ಗುಂಡ. ರೈತರ ದರೋಡೆ ಮಾಡೋಕೆ ಬಂದಿರೂರು ಅಂತೀಯಲ್ಲ.... ಅದೆಂಗಯ್ಯ ನಿಂಗೆ ಬಾಯಿ ಬಂತು.

ಇನ್ಸ್‌ಪೆಕ್ಟರ್ : ಲೇ.... ಯಾರೋ ಅವನು ಹಲ್ಲು ಹಿಡಿದು ಮಾತಾಡೊ.

ಗುಂಪಿನಲ್ಲಿದ್ದ ಮತ್ತೊಬ್ಬ ರೈತ: (ಇನ್ಸ್‌ಪೆಕ್ಟರ್ ಕಡೆ ಕೈ ತೋರಿಸುತ್ತಾ)

ಉಳುಮೆ ಮಾಡೋ ಒಂದು ಗುಳಿನ ರೇಟು ಎಷ್ಟು ಆಗದೆ ಅಂತ ಗೊತ್ತೇನಯ್ಯ ನಿಂಗೆ?

ಮತ್ತೊಬ್ಬ ರೈತ: ಗೊಬ್ಬರದ ರೇಟು ಹೆಂಗೆ ಗಗನಕ್ಕೆ ಹೋಗದೆ ಗೊತ್ತೇನಣ್ಣ?

ಮತ್ತೊಬ್ಬ ರೈತ: ನಮಗೆ ಜಮೀನು ಬೇಡ; ಏನು ಬೇಡ. ತಿಂಗಳು ತುಂಬ್ತಿದ್ದಂಗೆ ನಿನ್ನಂಗೆ ನಮ್ಮ ರೈತರ್ಗು ಸಂಬಳ ಕೊಡ್ಸಯ್ಯ ಸಾಕು. ಈಗಿನಂಗೆ ಹೊಲ ಗದ್ದೇಲಿ ಗೆಯ್ತೀವಿ.

ಇನ್ಸ್‌ಪೆಕ್ಟರ್ : ನಿಮ್ಮ ಕಂತೆ ಪುರಾಣ ಕಟ್ಕೊಂಡು ನಂಗೇನು? ಮೊದ್ಲು ಇಲ್ಲಿಂದ ಜಾಗ ಖಾಲಿ ಮಾಡ್ತಿರೋ, ಇಲ್ವೊ? ನೋಡಿ, ಪರಿಸ್ಥಿತಿ ಕೈ ಮೀರಿ ಹೋಗ್ತಾಯಿದೆ, ಹುಷಾರ್.

ಮುಖಂಡ : ಪರಿಸ್ಥಿತಿ ಕೈ ಮೀರೋಗುವಂಗೆ ಮಾಡ್ತ ಇರೋರು ನೀವು, ಮಹಾತ್ಮ ಗಾಂಧಿ ಪಟ ಹಿಡ್ಕೊಂಡು ನಾವೆಲ್ಲ ಶಾಂತಿಯಿಂದ ತಾಲ್ಲೂಕು ಆಫೀಸಿಗೆ ಹೋದ್ರೆ, ನಿಮ್ಮ ಗಂಟೇನು ಹೋಗುತ್ತೆ?

ಇನ್ಸ್‌ಪೆಕ್ಟರ್ : ಆಗೋದಿಲ್ಲ. ಮುಂದಕ್ಕೆ ಒಂದು ಹೆಜ್ಜೆ ಇಡ್ಬೇಡಿ.

ಮತ್ತೊಬ್ಬ ರೈತ: ಲೇ, ದಂಡಿಗೆ ಹೆದರಲಿಲ್ಲ; ದಾಳಿಗೆ ಹೆದರಲಿಲ್ಲ. ಈ ಪÉÇ◌ೀಲೀಸ್ನೋನ ಖಾಕಿ ಬಟ್ಟೆಗೆ ಹೆದರ್ಬುಟ್ಟರೆ ನುಗ್ಗುಲ್ರ.... ಆದಂಗೆ ಆಗ್ಲಿ.

(ರೈತರೆಲ್ಲಾ ಹುಮ್ಮಸ್ಸಿನಿಂದ ಘೋಷಣೆಗಳನ್ನು ಕೂಗುತ್ತ ಮುನ್ನುಗ್ಗುತ್ತಾರೆ. ಪೊಲೀಸರು ಅಡ್ಡಗಟ್ಟಿ, ಚದುರಿಸಲು ಲಾಠಿ ಛಾರ್ಜು ನಡೆಸುತ್ತಾರೆ. ರೈತರು ಲಾಠಿ ಏಟುಗಳಿಗೆ ಅಂಜದೆ ಮುನ್ನಡೆಯುತ್ತಿದ್ದಾಗ ಇನ್ಸ್‌ಪೆಕ್ಟರ್ ಗುಂಡು

ಹಾರಿಸಲು ಆಜ್ಞಾಪಿಸುತ್ತಾನೆ. ಹಲವು ಸುತ್ತು ಗುಂಡು ಹಾರುತ್ತವೆ. ರೈತರ ಹೆಣಗಳು ಬೀಳುತ್ತವೆ. ಗುಂಪು ಚೆಲ್ಲಾಪಿಲ್ಲಿಯಾಗಿ ಚದುರುತ್ತದೆ.)

ಕಾನ್‌ಸ್ಟೇಬಲ್ : (ಬಿದ್ದಿರುವ ಹೆಣಗಳನ್ನು ಲೆಕ್ಕ ಹಾಕಿ)
ಎರಡು ಹೆಣಗಳು ಬಿದ್ದಿವೆ ಸಾರ್.

ಇನ್‌ಸ್ಪೆಕ್ಟರ್ : ಎಳ್ದು ಹಾಕ್ರೊ ವ್ಯಾನ್ ಒಳಕ್ಕೆ.
(ರೈತರ ಹೆಣದ ಕಾಲುಗಳನ್ನು ಹಿಡಿದು ದರದರನೆ ಎಳೆಯುತ್ತಾ ವ್ಯಾನ್ ಕಡೆಗೆ ಪೋಲಿಸರು ಸಾಗುತ್ತಿದ್ದಂತೆಯೇ ಹಿನ್ನೆಲೆಯಿಂದ ಸಿದ್ಧಲಿಂಗಯ್ಯನವರು ರಚಿಸಿರುವ ಒಂದು ಹಾಡು ಕೇಳಿ ಬರುತ್ತದೆ.)

ಯಾರಿಗೆ ಬಂತು
ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ
ಟಾಟಾ ಬಿರ್ಲಾರ ಜೇಬಿಗೆ ಬಂತು
ಜನಗಳ ತಿನ್ನುವ ಬಾಯಿಗೆ ಬಂತು
ಕೋಟ್ಯಧೀಶರ ಕೋಣೆಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ
ಬಡವರ ಮನೆಗೆ ಬರಲಿಲ್ಲ
ಬೆಳಕಿನ ಕಿರಣ ತರಲಿಲ್ಲ
ಗೋಳಿನ ಕಡಲನು ಬತ್ತಿಸಲಿಲ್ಲ
ಸಮತೆಯ ಹೂವನು ಅರಳಿಸಲಿಲ್ಲ
ಹಣವಂತರು ಕೈ ಸನ್ನೆ ಮಾಡಿದರೆ
ಕತ್ತಲೆಯಲ್ಲೇ ಬೆತ್ತಲೆಯಾಯ್ತು
ಯಾರೂ ಕಾಣದ ಸ್ವಾತಂತ್ರ್ಯ
ನಲವತ್ತೇಳರ ಸ್ವಾತಂತ್ರ್ಯ
ಯಾರಿಗೆ ಬಂತು
ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ

ಪೋಲಿಸರ ಬೂಟಿಗೆ ಬಂತು
ಮಾಲೀಕರ ಚಾಟಿಗೆ ಬಂತು
ಬಂದೂಕಿನ ಗುಂಡಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ

(ಈ ಹಾಡು ಮುಗಿಯುತ್ತಿದ್ದಂತೆಯೇ ರಂಗದ ಮೇಲೆ ಕತ್ತಲು ಆವರಿಸುತ್ತದೆ. ಮತ್ತೆ ಬೆಳಕು ವ್ಯಾಪಿಸಿದಾಗ ತಮ್ಮಣ್ಣ, ಕೂಲಿ ಮತ್ತು ಕತ್ತೆ ಜವರ ರಂಗದ ಮೇಲಿರುತ್ತಾರೆ.)

ತಮ್ಮಣ್ಣ : ದೇಶಕ್ಕೆ ಅನ್ನ ಕೊಡುವ ರೈತರನ್ನು ಗುಂಡಿಕ್ಕಿ ಕೊಂದು, ಮುನಿಸಿಪಾಲ್ಟಿಯವರು ಸತ್ತ ನಾಯಿ ಎಳ್ಕೊಂಡು ಹೋದಂತೆ ರೈತರ ಹೆಣವನ್ನು ಎಳ್ದು ಬಿಸಾಡಿದ್ದನ್ನ ನೋಡ್ದೇನಯ್ಯ.

ಕತ್ತೆ ಜವರ : ನೋಡ್ದೆ ಸ್ವಾಮಿ.

ತಮ್ಮಣ್ಣ : ಅದನ್ನು ನೋಡಿ ನಿಂಗೇನು ಅನ್ನಿಸಲಿಲ್ವೆ?

ಕತ್ತೆ ಜವರ : ಹೊಟ್ಟೆಗೆ ಬೆಂಕಿ ಹಾಕ್ದಂಗಾಯ್ತು ಕಣಪ್ಪ. ಬಾಯ್ ಬಡ್ಕೊವಂಗಾಯ್ತು.

ತಮ್ಮಣ್ಣ : ಅಷ್ಟೇನೆ? ಇನ್ನೇನು ಅನಿಸಲಿಲ್ಲವೆ?

ಕತ್ತೆ ಜವರ : (ಮೌನದಿಂದ ಇಲ್ಲವೆನ್ನುವಂತೆ ತಲೆ ಅಲ್ಲಾಡಿಸುತ್ತಾನೆ.)

ತಮ್ಮಣ್ಣ : ಜವರಯ್ಯ, ಕಳೆದ ತಿಂಗಳು ನಾಲ್ಕೈದು ದಿನ ಯಾವ ಊರ್ನಲ್ಲೂ ಸರ್ಕಾರಿ ಬಸ್‌ಗಳು ಓಡಾಡ್ತಿರಲಿಲ್ಲ. ಯಾಕೆ ಹೇಳು?

ಕತ್ತೆ ಜವರ : ಗೊತ್ತಿಲ್ಲ ಸ್ವಾಮಿ.

ತಮ್ಮಣ್ಣ : ನೀನೇನು ಪೇಪರ್ ಓದುದಿಲ್ವೇನಯ್ಯ?

ಕತ್ತೆ ಜವರ : ಇದೇನು ಮೇಷ್ಟ್ರೆ ತಮಾಷೆ ಮಾಡ್ತಿದ್ದೀರ? ನಂಗೆ ಅಕ್ಷರವೇ ಬರಲ್ತು.

ತಮ್ಮಣ್ಣ : ಇನ್ನೇನು ಬರುತ್ತೇ? ಮಂಡಿ ಉದ್ದ ಬೆಳೆ ಬೆಳ್ಕೊಂಡು, ನಡೀನ ಉದ್ದ ಸಾಲ ಬೆಳ್ಸೋದು ಚೆನ್ನಾಗಿ ಗೊತ್ತಿದೆ ಅಲ್ವೇನಯ್ಯ?

ಕತ್ತೆ ಜವರ : ನಮ್ಮ ರೈತರ ಬಾಳ್ನ ನೀವು ಆಡ್ಕೊಂಡು ನಗ್ತೀರ ಮೇಷ್ಟ್ರೆ.

ತಮ್ಮಣ್ಣ : ನಾನು ಈ ಮಾತು ಹೇಳ್ತಾ ಇರೋದು, ನಿನ್ನ ಆಡ್ಕೊಂಡು ನಗುಕಲ್ಲ ಕಣಯ್ಯ. ನೀನು ನಿನ್ನಂಥ ರೈತರು ನಾಲ್ಕು ಅಕ್ಷರ ಅಂತ ಕಲ್ತು, ಪತ್ರಿಕೆಗಳನ್ನು ನಿತ್ಯ ಓದುವಂಗಿದ್ದರೆ, ನಿಮ್ಮ ಸುತ್ತಮುತ್ತ ಏನು ನಡೀತಾದೆ? ಯಾರ್‍ಯಾರು ಹೆಂಗೆಂಗೆ ಈ ದೇಶನ ಲೂಟಿ ಮಾಡ್ತಾವ್ರೆ? ನಿನ್ನಂಥ ರೈತರು ಎಷ್ಟೇ ದುಡಿದರು ಉದ್ಧಾರವಾಗ್ದೆ ಇರಲು ಕಾರಣವೇನು? ಅನ್ನಾದಾದ್ರು ತಿಳೀತಿರ್‍ಲಿಲ್ವೇನಯ್ಯ?

ಕತ್ತೆ ಜವರ : ಏನ್ ಮಾಡೀರಿ ಸ್ವಾಮಿ? ನಮ್ಮ ಅಪ್ಪನ ಕಾಲದಿಂದ್ಲು ಇದ್ಯೆ ನಮಗೆ ಆಗಿ ಬರ್‍ಲಿಲ್ಲ.

ತಮ್ಮಣ್ಣ : ಅಪ್ಪನ ಕಾಲ.... ತಾತನ ಕಾಲ ಆಯ್ತಲ್ಲ. ಇನ್ನು ಮುಂದಕ್ಕೆ ನಿನ್ನ ಮಕ್ಕಳ ಕಾಲಕ್ಕಾದ್ರು ಒಸಿ ವಿದ್ಯೆ ಕಲಿಸು. ಅವರಾದ್ರು ತಲೆ ಎತ್ಕೊಂಡು ತಿರ್‍ಗಾಡುವಂಗಾಗ್ಲಿ. ಜವರಯ್ಯ, ಆ ಬಸ್‌ನ ವಿಚಾರ ಹೇಳ್ತಿದ್ನಲ್ಲ.... ಆದ ಕೇಳು. ಸರ್ಕಾರಿ ಬಸ್ ಕಂಡಕ್ಟರ್ ಜೊತೇಲಿ ಯಾರೋ ಒಬ್ಬ ಪ್ರಯಾಣಿಕ ಜಗಳ ಆಡ್ಬುಟ್ಟು ಕಂಡಕ್ಟರ್‍ಗೆ ಹೊಡ್ದು ಬುಟ್ಟ. "ಒಬ್ಬ ಕಂಡಕ್ಟರ್ ಮೈಮೇಲೆ ಏಟು ಬೀಳ್ತು; ಇದು ನಮಗೆಲ್ಲಾ ಆದ ಅವಮಾನ; ಆದ್ದರಿಂದ ಹೊಡ್ದೋನ್ ಮೇಲೆ ಸರಿಯಾದ ಕ್ರಮ ಕೈಗೊಂಡು, ನಮಗೆಲ್ಲಾ ಸರಿಯಾದ ರಕ್ಷಣೆ ಕೊಡೋತನಕ ನಾವ್ಯಾರು ಬಸ್‌ಗಳನ್ನೆ ಓಡ್ಸೊಲ್ಲ" ಅಂತ ಹೇಳಿ ಇಡೀ ಕರ್ನಾಟಕದಲ್ಲಿ ಸರ್ಕಾರಿ ಬಸ್‌ಗಳ ಡ್ರೈವರ್‍ಗಳು ಮತ್ತು ಕಂಡಕ್ಟರ್‍ಗಳೆಲ್ಲಾ ಒಗ್ಗಟ್ಟಿನಿಂದ ಮುಷ್ಕರ ಮಾಡುದ್ರು. ಬೆಂಗಳೂರ್‍ನಲ್ಲಿ ಒಬ್ಬ ಲಾಯರ್‍ಗೆ ಪೋಲಿಸ್ನೋನು ಹೊಡ್ದ ಅಂತ ಎಲ್ಲಾ ಕೋರ್ಟುಗಳ ಲಾಯರ್‍ಗಳು ಪ್ರತಿಭಟನೆ ಮಾಡುದ್ರು. ಮೂರು ದಿನ ಕೋರ್ಟುಗಳೇ ನಡೀಲಿಲ್ಲ. ಆದರೆ ಕರ್ನಾಟಕದಲ್ಲಿ ರೈತ ಚಳುವಳಿ ನಡೆದಾಗ ಹತ್ತು ಜನ ರೈತರು ಪೊಲೀಸರ ಗುಂಡಿಗೆ ಬಲಿಯಾದ್ರಲ್ಲಯ್ಯ, ಆಗ ನಿನ್ನಂಥ ಲಕ್ಷಾಂತರ ಮಂದಿ ರೈತರು ಒಂಚೂರಾದ್ರು ಪ್ರತಿಭಟನೆ ಮಾಡುದ್ರೇನಯ್ಯ?

ಕತ್ತೆಜವರ : (ಮೌನದಿಂದ ತಲೆಯಲ್ಲಾಡಿಸುತ್ತಾನೆ)

ತಮ್ಮಣ್ಣ : ನೀನು ತಿರುಪತಿ ತಿಮ್ಮಪ್ಪನ ನಂಬ್ಕೊಂಡು. ಅವನ ಗೋಲ್ಕಕ್ಕೆ ಕಾಣಿಕೆ ಒಪ್ಪಿಸಿ, ಒಳ್ಳೇದಾಗ್ಲಿ ಅಂತ ಕೇಳ್ಕೊಂಡಿದ್ದಲ್ಲ, ಈಗ ಆ ದೇವರು ನಿನ್ನ ಕಾಪಾಡ್ತ ಇದ್ದನೇನಯ್ಯ?

ಕತ್ತೆ ಜವರ : ಅಯ್ಯೋ.... ನಮ್ಮ ಕಷ್ಟಕ್ಕೆ ಯಾವ ದೇವರನ್ನು ಕಾಣೆ.... ಯಾವ ದಿಂಡಿರನ್ನು ಕಾಣೆ.

ತಮ್ಮಣ್ಣ : ನೋಡು ಜವರಯ್ಯ, ಯಾವ ಕಾಲ್ದಲ್ಲೂ, ಯಾವ ದೇವರು, ಯಾರನ್ನೂ ಕಾಪಾಡಿಲ್ಲ ಕಣಯ್ಯ, ಅದೆಲ್ಲಾ ಒಂದು ಭ್ರಮೆ. ಇನ್ನು ಮುಂದಕ್ಕೆ ನೀನು ಯಾವ ದೇವರನ್ನೂ ನಂಬ್ಕೋಬ್ಯಾಡ. ಯಾವ ಗೋಲ್ಕಕ್ಕೂ ಕಾಸು ಹಾಕ್ಬೇಡ. ಆ ದುಡ್ಡನ್ನೆ ಖರ್ಚುಮಾಡಿ ಹೊಟ್ಟೆ ತುಂಬ ಏನಾದ್ರು ತಿನ್ನು. ನಿನ್ನ ಕಷ್ಟ ಬಗೆಹರೀಬೇಕಾದ್ರೆ, ನಿನ್ನಂಥ ರೈತರೆಲ್ಲಾ ಮೊದ್ಲು ಒಂದಾಗಿ. ನಿಮ್ಮ ಸುಲಿಗೆ ಮಾಡ್ತಿರೋರು ಯಾರು ಅನ್ನೋದ್ನ ತಿಳ್ಕೊಂಡು, ಅಂಥಾವರ ವಿರುದ್ಧ ಒಗ್ಗಟ್ಟಾಗಿ ಹೋರಾಟ ಮಾಡಿ. ಆಗ ನಿನ್ನಂಥ ರೈತರು ಸ್ವಲ್ಪ ನೆಮ್ಮದಿಯಿಂದ ಬಾಳುವಂಥ ಕಾಲ ಬರುತ್ತೆ.

(ಅಷ್ಟರಲ್ಲಿ ರಂಗದ ಮತ್ತೊಂದು ಬದಿಯಿಂದ ಮೆರವಣಿಗೆಯೊಂದು ಬರುತ್ತದೆ. ಒಬ್ಬ ವ್ಯಕ್ತಿಯನ್ನು ತೆರೆದ ಕಾರಿನಲ್ಲಿ ಕುಳ್ಳಿರಿಸಿಕೊಂಡು, ಅವನ ಕೊರಳ ತುಂಬ ಹೂ ಮಾಲೆಗಳನ್ನು ಹಾಕಿ, ಅವನಿಗೆ ಜೈಕಾರಗಳನ್ನು ಹಾಕುತ್ತ ಮೆರವಣಿಗೆಯ ಮಂದಿ ಬರುತ್ತಾರೆ.)

ಕತ್ತೆ ಜವರ : (ಕೆಲವು ಗಳಿಗೆಯ ಕಾಲ, ಆ ಮೆರವಣಿಗೆಯನ್ನು ಗಮನಿಸಿ)
ಇವತ್ತು ನಮ್ಮೂರಲ್ಲಿ ಮಂತ್ರಿಗಳಿಗೆ ಸನ್ಮಾನ ಇಟ್ಕೊಂಡವ್ರೆ. ಅದ್ಕೆ ಅವರ್ನ ಊರ ತುಂಬ ಮೆರಿಸ್ಕೊಂಡು ಕರ್ಕೊಂಡು ಬತ್ತಾವ್ರೆ.

ತಮ್ಮಣ್ಣ : ಸನ್ಮಾನ ಮಾಡಿ ಏನು ಕೊಡ್ತೀರಪ್ಪ?

ಕತ್ತೆ ಜವರ : ಇದಕ್ಕೆ ಎರಡನೇ ವರ್ಷದಲ್ಲಿ ಹಿಂಗೆ ಸನ್ಮಾನ ಮಾಡಿ ಬೆಳ್ಳಿ ಕತ್ತಿ ಕೊಟ್ಟಿದ್ರು. ಈ ಸತಿ ದಪ್ಪಾಗಿರೋದು ಒಂದು ಬೆಳ್ಳಿ ಗದೆ ಕೊಡ್ಬೇಕು ಅಂತ ನಮ್ಮೂರ ವಿಲೇಜು ಅಕೌಂಟೆಂಟ್ರು ಊರ ಜನನೆಲ್ಲ ತಾಕೀತು ಮಾಡಿ ಚಂದ ಎತ್ತವ್ರೆ.
(ಗ್ರಾಮ ಲೆಕ್ಕಿಗ, ಬ್ಯಾಂಕಿನ ಕಾರ್ಯದರ್ಶಿ, ಸೇಟು ನೇತೃತ್ವದಲ್ಲಿ ಮೆರವಣಿಗೆಗೆ ನಡೆಯುತ್ತ, ಮುಂದೆ ಮುಂದೆ ಸಾಗಿ ಹೋದ ನಂತರ...)

ತಮ್ಮಣ್ಣ : ಏನು ಜವರಯ್ಯ, ಐವತ್ತು ರೂಪಾಯಿಗೆ ಸಿಗ್ತಿದ್ದ ಒಂದು ಯೂರಿಯ ಮೂಟೆ ಬೆಲೆ, ಏಕ್‌ದಂ ನೂರು ರೂಪಾಯಿ ಆದಾಗ, ಇಷ್ಟೊಂದು ದುಡ್ಡನ್ನ ನಮ್ಮ ರೈತ

ಎಲ್ಲಿಂದ ತಂದನು ಅಂತ....ನಿನ್ನಂಥ ರೈತರ ಬಗ್ಗೆ ಏನಾದ್ರೂ ಸ್ವಲ್ಪ ಯೋಚ್ನೇನ ಈ ಮಂತ್ರಿ ಮಾಡ್ದುನೇನಯ್ಯ?

ಕತ್ತೆ ಜವರ : (ಕ್ಷಣ ಕಾಲ ಚಿಂತಿಸಿ)
ಇಲ್ಲ ಕಣಪ್ಪ.

ತಮ್ಮಣ್ಣ : ನಮ್ಮ ರೈತ ಹಗಲು ರಾತ್ರಿ ಅನ್ದೆ ಹೊಂಗ್ಲೋ ಅಂತ ದುಡಿದು, ಬೆಳೆ ಬೆಳೀತನೆ. ಆತನ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುವಂಗಾಗ್ಲಿ, ಅವನ ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆ ದೊರಕುವಂಗಾಗ್ಲಿ ಅಂತ ಯಾವತ್ತಾದ್ರು ನಿನ್ನಂಥ ರೈತರಿಗಾಗಿ ಒಂದು ಒಳ್ಳೆಯ ಯೋಜನೆಯನ್ನು ಹಾಕಿಕೊಂಡು ಅದನ್ನು ಕಾರ್ಯರೂಪಕ್ಕೆ ತಂದಿದ್ದೇನಯ್ಯ?

ಕತ್ತೆ ಜವರ : (ಇಲ್ಲವೆನ್ನುವಂತೆ ತಲೆಯಲ್ಲಾಡಿಸುತ್ತಾನೆ.)

ತಮ್ಮಣ್ಣ : ನಮ್ಮ ರೈತರು ಪೋಲಿಸ್ನೋರ ಗುಂಡಿಗೆ ಬಲಿಯಾಗಿ ಸತ್ತಾಗ, ಅಂಥಾ ರೈತರ ಸಾವಿಗಾಗಿ ಇವನು ಒಂದು ತೊಟ್ಟು ಕಣ್ಣೀರು ಹಾಕ್ದನೇನಯ್ಯ?

ಕತ್ತೆ ಜವರ : ಇಲ್ಲ ಕಣಪ್ಪ.

ತಮ್ಮಣ್ಣ : (ಕತ್ತೆ ಜವರನಿಂದ ಏಟು ತಿಂದಿದ್ದ ಕೂಲಿಯವನ ಕೈ ಹಿಡಿದು ಅವನನ್ನ ಮುಂದಕ್ಕೆ ಕರೆತಂದು)
ನೋಡು ಜವರಯ್ಯ, ಇವತ್ತು ನಿನ್ನ ಜೊತೇಲಿ ದುಡೀತ ಇರೋನು ಇವನು, ನಾಳೆ ನೀನು ಸತ್ತರೆ ನಿನಗಾಗಿ ಗುಂಡಿ ತೋಡಿ, ಒಂದು ತೊಟ್ಟು ಕಣ್ಣೀರು ಹಾಕೋನು ಇವನು. ನೀನು.... ನಿನ್ನಂಥ ಕೋಟಿಗಟ್ಟಲೆ ರೈತರ ಕಷ್ಟನಷ್ಟಗಳಿಗೆ ಕಾರಣ ಆಗಿರೋದು ಇಂತಹ ಕೂಲಿಯವನಲ್ಲ ಕಣಯ್ಯ. ಈಗ ನೀನು ಮೆರವಣಿಗೆಯಲ್ಲಿ ನೋಡ್ದಲ್ಲ ಅಂತಹ ಭ್ರಷ್ಟ ರಾಜಕಾರಣಿಗಳು; ಲಂಚಕೋರ ಸರ್ಕಾರಿ ನೌಕರರು, ರೈತರ ದುಡಿಮೆಯ ಫಲವನ್ನು ಸರಿಯಾದ ಬೆಲೆ ಕಟ್ಟದೇ ಊಟ ದೊಡ್ಡ ದೊಡ್ಡ ವ್ಯಾಪಾರಿಗಳು ಕಾರಣರಾಗವ್ರೆ. ಅವರೆಲ್ಲರ ವಿರುದ್ಧ ನೀನು... ನಿನ್ನಂತಹ ರೈತರು... ಇಂತಹ ಕೂಲಿಯವರನ್ನು ಜೊತೇಲಿ ಕಟ್ಕೊಂಡು ಹೋರಾಟ ಮಾಡಬೇಕು ಕಣಯ್ಯ.

ಕತ್ತೆ ಜವರ : (ತಮ್ಮಣ್ಣನವರ ಮಾತುಗಳು ಕತ್ತೆ ಜವರ ಮನಸ್ಸಿನ ಮೇಲೆ ಪರಿಣಾಮವನ್ನು ಬೀರಿದವು. ಈಗ ಕತ್ತೆ ಜವರಯ್ಯನು ಕೂಲಿಯವನ ಹತ್ತಿರ ಬಂದು, ಅವನ ಎರಡು ಕೈಗಳನ್ನು ಹಿಡಿದುಕೊಂಡು...)

ನಾನು ತಪ್ಪು ಮಾಡ್ಬುಟ್ಟೆ ಕಲ. ಇದೊಂದು ಸತಿ ನನ್ನ ತಪ್ಪ ಹೊಟ್ಟೇಲಿ ಹಾಕೊಂಡುಬುಡು. ಇನ್ನು ಯಾವತ್ತೂ ಯಾವ ಕೂಲಿಯವನ ಮೇಲೆ ನಾನು ಕೈ ಎತ್ತೂದಿಲ್ಲ. ನಮ್ಮ ಅಟ್ಟೇಲಿ ಹಿಟ್ಟು ಉಣ್ಕೊಂಡು ಗದ್ದೆ ತಕೆ ಹೋಗವ ನಡಿ. ನೀ ಕೇಳ್ದಂಗೆ ಒಂದು ರೂಪಾಯಿ ಸೇರಿಸಿ ಹತ್ತು ರೂಪಾಯ್ನೆ ಕೊಡ್ತೀನಿ.

(ತಮ್ಮಣ್ಣನವರ ಕಡೆ ತಿರುಗಿ...)

ಮೇಷ್ಟ್ರರೇ ನೀವು ನಡೀರಿ. ನಾನು ಇವನು ಜೊತೇಲಿ ಅಟ್ಟೇತಕೆ ಹೋಯ್ತಿವಿ.

(ಎನ್ನುತ ಮುಂದಕ್ಕೆ ಅಡಿಯಿಡುತ್ತಿದ್ದಂತೆಯೇ. ರಂಗದ ಮೇಲೆ ಕತ್ತಲು ಕವಿಯುತ್ತದೆ.)

❍

ಬರಹಗಾರ

ಹೆಸರು : ಸಿ.ಪಿ. ನಾಗರಾಜ

ತಾಯಿ : ಲಕ್ಷ್ಮಿದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ.

ತಂದೆ : ಪುಟ್ಟೇಗೌಡ, ಚೆಕ್ಕೆರೆ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಓದು : ಎಂ.ಎ., ಪಿಎಚ್.ಡಿ.

ಕೆಲಸ : ಕನ್ನಡ ಉಪನ್ಯಾಸಕ

1971-72 ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ.

1972-2003 ಭಾರತಿ ಕಾಲೇಜು, ಕಾಳಮುದ್ದನ ದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

2006-ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

ನಾಟಕ :

ಭಾಗೀರಥಿ	ಅಂಬೆ
ಹಾವು	ಅಂಗಿ ಬಟ್ಟೆ
ಒಂದು ರೂಪಾಯಿ	ಕಳ್ಳರಿದ್ದಾರೆ... ಎಚ್ಚರಿಕೆ
ಹೆಣದ ಹಣ	

ಗದ್ಯ :

ಹಳ್ಳಿಗಾಡಿನ ರೂವಾರಿ	ಡಾ.ಬಂದೀಗೌಡ
ಆಣೆ ಪ್ರಮಾಣಗಳು	ಬಯ್ಗುಳ
ಸರ್ವಜ್ಞ ವಚನಗಳ ಓದು	ಅಲ್ಲಮ ವಚನಗಳ ಓದು
ಶಿವಶರಣಶರಣೆಯರ ವಚನಗಳ ಓದು	ಶಿವಶರಣರ ವಚನಗಳ ಓದು
ಬಸವಣ್ಣ ವಚನಗಳ ಓದು	ಮುದ್ದೆಗಂಟು

ವಿಳಾಸ : ಸಿ.ಪಿ. ನಾಗರಾಜ, 75, 'ಎ' ಬ್ಲಾಕ್, 5 ನೆಯ ಕ್ರಾಸ್, ಕೃಿಷ್ಣ ಗಾರ್ಡನ್, ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು-560059. ಮೊ.9986347521. ngy7777@gmail.com